# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026



Good Opportunity for Branding
1,25,000+
Digital E-PAPER READERS
No.1 HAMPI TIMES LEADING PRINT & DIGITAL District News Paper
Call Us for Advertisements: 9448633038



ಸಂಪುಟ:02 • ಸಂಚಿಕೆ: 248 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 08.04.2025 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 248 • PRGI No:KARKAN/2023/88055 • VIJAYANAGARA • 08.04.2025 • Tuesday • Page:04 • Rs:2


ಚಿತ್ರ: ಶಿವಶಂಕರ ಬಣಗಾರ



ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿಯಲ್ಲಿ ಶ್ರೀಲಕ್ಷ್ಮೀನಾರಾಯಣಸ್ವಾಮಿ ಹಾಗೂ ಶ್ರೀ ಆಂಜನೇಯ ಸ್ವಾಮಿಯ ನೂತನ ಜೋಡು ತೇರುಗಳನ್ನು ಭಾನುವಾರ ಸಂಜೆ ಭಕ್ತರು ಸಂಭ್ರಮ ಸಡಗರದಿಂದ ಎಳೆದು ಭಕ್ತಿ ಸಮರ್ಪಿಸಿದರು. ಶಾಸಕ ನೇಮಿರಾಜ ನಾಯ್ಕ, ಮಾಜಿ ಸಚಿವ ಶ್ರೀರಾಮುಲು, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಎಸ್ಪಿ ಶ್ರೀಹರಿಬಾಬು ಬಿ.ಎಲ್. ಎಎಸ್ಪಿ ಸಲೀಂಪಾಷ ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು. ಪೊಲೀಸರು ಸೂಕ್ತ ಭದ್ರತೆ ಕಲ್ಪಿಸಿದ್ದರು.

# ಜೋಡು ರಥಗಳ ಹಿಂದಿದೆ ರೋಚಕ ಕಥೆ

## ಭಕ್ತರ ಒಲವಿಗೆ ಸ್ಪಂದಿಸಿದ ಜಿಲ್ಲಾಧಿಕಾರಿ ದಿವಾಕರ। ಡಿಸಿ ಮಾರ್ಗದರ್ಶನದಿಂದ ಸದ್ಭಕ್ತರ ಗುಂಪು ರಚನೆ

## ದಾನಿಗಳಿಂದ ನಿರೀಕ್ಷೆಗೂ ಮೀರಿ ಹರಿದು ಬಂದ ಅಪಾರ ಹಣ। ಭಕ್ತರು ಕೊಟ್ಟ ದೇಣಿಗೆ ಸದ್ಬಳಕೆ


■ ಬಸಾಪುರ ಬಸವರಾಜ
**ಹಂಪಿ ಟೈಮ್ಸ್ ಹೊಸಪೇಟೆ**

ಒಬ್ಬ ಜಿಲ್ಲಾಧಿಕಾರಿಗೆ ಸಾಮಾಜಿಕ ಕಾಳಜಿ-ಪ್ರಜ್ಞೆ ಮತ್ತು ಆಧ್ಯಾತ್ಮಿಕ ಗುಣಗಳಿದ್ದರೆ ಅಭಿವೃದ್ಧಿ ಕಾರ್ಯಗಳು ಹೇಗೆಲ್ಲ ಸುಲಲಿತವಾಗಿ ಸಾಗುತ್ತವೆ ಎಂಬುದಕ್ಕೆ ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಸಾಕ್ಷಿಯಾಗಿ ನಿಲ್ಲುತ್ತಾರೆ. ಭಕ್ತರ ಇಚ್ಛಾಶಕ್ತಿಗೆ ಡಿಸಿ ಬೆಂಬಲವಾಗಿ ನಿಂತಿದ್ದರ ಫಲವಾಗಿ ಇಂದು ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿಯಲ್ಲಿ ನಿರ್ಮಾಣವಾದ ಬೃಹತ್ ಗಾತ್ರದ ಜೋಡು ರಥಗಳು ಎಲ್ಲರ ಕಣ್ಮನ ಸೆಳೆಯುತ್ತಿವೆ.

ಮರಿಯಮ್ಮನಹಳ್ಳಿ ಭಾಗದ ಆರಾಧ್ಯ ದೈವ, ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ಮತ್ತು ಶ್ರೀ ಆಂಜನೇಯ ಸ್ವಾಮಿಗೆ ಅಪಾರ ಭಕ್ತವೃಂದವಿದೆ. ಸುಮಾರು 700 ವರ್ಷಗಳ ಜೋಡು ತೇರುಗಳು ಶಿಥಿಲಾವಸ್ಥೆಗೆ ತಲುಪಿದವು. ಅವುಗಳನ್ನು ಬದಲಿಸಬೇಕೆಂಬುದು ಭಕ್ತರ ಹಂಬಲವಾಗಿತ್ತು. ಭಕ್ತರು ಜಿಲ್ಲಾಧಿಕಾರಿ, ಸಂಸದ ಮತ್ತು ಶಾಸಕರನ್ನು ಭೇಟಿ ಮಾಡಿ ರಥೋತ್ಸವ ನಿರ್ಮಾಣಕ್ಕೆ ಬೇಡಿಕೆ ಇಟ್ಟಿದ್ದರು. ಆದರೆ, ಸಾರ್ವಜನಿಕರ ಸಹಕಾರವಿಲ್ಲದೆ ಬರೀ ಸರ್ಕಾರದ ಅನುದಾನದಲ್ಲಿ ನೂರಾರು ವರ್ಷ ಕಾಲ ಬಾಳಿಕೆ ಬರುವಂಥ ಜೋಡು ರಥಗಳನ್ನು ನಿರ್ಮಿಸುವುದು ಕಷ್ಟಸಾಧ್ಯ ಎಂಬುದನ್ನು ಅರಿತಿದ್ದ ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ಮರಿಯಮ್ಮನಹಳ್ಳಿಗೆ ಸೆ.16, 2023ರಂದು ತೆರಳಿ ಅರಳಿಕಟ್ಟೆಯಡಿ ಕುಳಿತು ಭಕ್ತರ ಅಭಿಪ್ರಾಯಗಳನ್ನು ಆಲಿಸಿದ್ದರು. ಹೊಸ ರಥಗಳ ನಿರ್ಮಾಣ ಯೋಜನೆಗೆ ಸದ್ಭಕ್ತರ ಗುಂಪು ರಚಿಸುವಂತೆ ಸೂಚಿಸಿದರು. ರಥಗಳ ನಿರ್ಮಾಣವಾಬೇಕೆಂದರೆ ಭಕ್ತರ ತಂಡ ಕೈಗೊಳ್ಳಬೇಕಾದ ಜವಾಬ್ದಾರಿಗಳು, ಕಾರ್ಯಗಳು, ರೂಪುರೇಷೆಗಳೊಂದಿಗೆ ಸಲಹೆ-ಮಾರ್ಗದರ್ಶನ ನೀಡಿದರು. ಇದು ಭಕ್ತರಲ್ಲಿ ಆತ್ಮವಿಶ್ವಾಸದೊಂದಿಗೆ ಹೊಸ ಹುರುಪು ಮೂಡಿತು. ಇದು ಹೊಸ ರಥಗಳ ನಿರ್ಮಾಣಕ್ಕೆ ನಾಂದಿಯೂ ಆಯಿತು. ಇದರಲ್ಲಿ ಡಿಸಿ ಅವರ ಹೃದಯಪೂರ್ವಕ ಉತ್ಸಾಹವೂ ಅಡಗಿತ್ತು.

ಜಿಲ್ಲಾಧಿಕಾರಿ ಸೂಚನೆ ಬೆನ್ನಲ್ಲೇ ಭಕ್ತರ ಗುಂಪೊಂದು ರೂಪು ತಳೆಯಿತು. ಸಾರ್ವಜನಿಕರಿಗೆ ಈ ಕಾರ್ಯದ ಬಗ್ಗೆ ಸ್ಪಷ್ಟ ಮಾಹಿತಿ ನೀಡುವಲ್ಲಿ, ನಿಯಮಬದ್ಧತೆ ಕಾಪಾಡುವಲ್ಲಿ ಹಾಗೂ ಸ್ಥಳೀಯರಿಗೆ ಸಹಕಾರ ನೀಡುವಲ್ಲಿ ಡಿಸಿ ದಿವಾಕರ ಮಹತ್ತರ ಪಾತ್ರವಹಿಸಿದರು. ಅವರ ಈ ಚುರುಕುತನ, ಉತ್ಸಾಹ, ನಿಷ್ಠೆಗೆ ಪೂರಕ ವಾತಾವರಣ ನಿರ್ಮಾಣವಾಯತು. ಡಿಸಿ ಅವರ ಮಾರ್ಗದರ್ಶನವು ಭಕ್ತ ಸಮುದಾಯದಲ್ಲಿ ನಂಬಿಕೆ ಹುಟ್ಟಲು ಕಾರಣವಾಯಿತು ಮತ್ತು ದೇಣಿಗೆ ಸಂಗ್ರಹಕ್ಕೆ ಬಲತುಂಬಿತು ಎನ್ನುತ್ತಾರೆ ಈ ಭಾಗದ ಭಕ್ತರು.

ಜಿಲ್ಲಾಧಿಕಾರಿ ಹಾಗೂ ಭಕ್ತರ ಪಾರದರ್ಶಕ ನಡೆ ಜನರಲ್ಲಿ ನಂಬಿಕೆ ಹೆಚ್ಚಿಸಿತು. ನಾವು ಕೊಡುವ ದೇಣಿಗೆ ಸತ್ಕಾರ್ಯಕ್ಕೆ ಬಳಸಲ್ಪಡುತ್ತದೆ ಎಂಬ ವಿಶ್ವಾಸ ಮೂಡಿಸಿತು. ಭಕ್ತರು ಮೊದಲ ಬಾರಿಗೆ ಗಣಿ ಉದ್ಯಮಿಗಳಾದ ಶ್ಯಾಮರಾಜ್ ಸಿಂಗ್ ಅವರನ್ನು ಸಂಪರ್ಕಿಸಿದಾಗ ಅವರು ತೇರು ನಿರ್ಮಿಸುವ ವಿಚಾರದಲ್ಲಿ ಹೃದಯ ವೈಶಾಲ್ಯತೆ ಮೆರೆದರು. ಒಂದು ತೇರು ನಿರ್ಮಿಸಲು ವ್ಯಯವಾಗುವ ಎರಡು ಕೋಟಿ ರೂಪಾಯಿ ವೆಚ್ಚವನ್ನು ಭರಿಸಲು ಮುಂದಾದರು. ಇದು ಸದ್ಭಕ್ತರಲ್ಲಿ ಮತ್ತಷ್ಟು ಹುರುಪು ತಂದಿತು. ಇದರೊಂದಿಗೆ ಜಯರಾಜ್ ಸಿಂಗ್ ಅವರು 50 ಲಕ್ಷ ರೂಪಾಯಿ ನೀಡಲು ಮುಂದಾದ ನಂತರ ಭಕ್ತರ ಕನಸು ಸಾಕಾರವಾಗಲು ಕಾರಣವಾಯಿತು. ಇನ್ನುಳಿದ ಭಕ್ತರು ನೀಡುವ ದೇಣಿಗೆ ಸತ್ಕಾರ್ಯಕ್ಕೆ ಸಲ್ಲುತ್ತದೆ ಎಂಬ ನಂಬಿಕೆಯೂ ಸೃಷ್ಟಿಯಾಯಿತು. ಸ್ಥಳೀಯರು, ಅನ್ಯ ಧರ್ಮಿಯರು ಸೇರಿದಂತೆ ಅಪಾರ ಸಂಖ್ಯೆ ಭಕ್ತರು, ಸುತ್ತಮುತ್ತಲಿನ ಕಾರ್ಖಾನೆಗಳು ಸಹ ಮುಂದೆ ಬಂದು ದೇಣಿಗೆ ನೀಡಿದವು. ಭಕ್ತರು ತಮ್ಮ ಶಕ್ತಿಯಾನುಸಾರ ತನು-ಮನ-ಧನದ ಮೂಲಕ ಭಕ್ತಿ ಸೇವೆ ಸಲ್ಲಿಸಿದರು.





ರಥ ನಿರ್ಮಾಣಕ್ಕೆ ನಿರೀಕ್ಷೆಗೂ ಮೀರಿ ಭಕ್ತರಿಂದ ಹಣ ಸಂಗ್ರಹ ಗೊಂಡಿತು. ಸಂಗ್ರಹಗೊಂಡ ಹಣವನ್ನು ಎಲ್ಲೂ ಪೋಲಾಗಂತೆ ಎಚ್ಚರಿಕೆವಹಿಸಿದ್ದ ಭಕ್ತರು ಹಗಲಿರಳೆನ್ನದೆ ಮಹತ್ಕಾರ್ಯದಲ್ಲಿ ಸಕ್ರಿಯ ವಾಗಿ ತೊಡಗಿಸಿಕೊಂಡರು. ಇದರ ಫಲವಾಗಿ ಅಂದುಕೊಂಡ ಸಮಯದೊಳಗೆ ಎರಡೂ ತೇರುಗಳು ರೂಪುಗೊಂಡವು. ಸರ್ಕಾರಿ ಅಧಿಕಾರಿಗಳ ಸಹಕಾರ ಮತ್ತು ಸಾರ್ವಜನಿಕರ ಇಚ್ಛಾಶಕ್ತಿಯ ಫಲವಾಗಿ ಮಾದರಿ ರಥಗಳು ನಿರ್ಮಾಣಕ್ಕೆ ಕಾರಣವಾಯಿತು. ಡಿಸಿ ದಿವಾಕರ ಅವರು ಹಾಕಿಕೊಟ್ಟ ಈ ಮಾರ್ಗದರ್ಶನ, ಸಾಮಾಜಿಕ ಕಾಳಜಿ ಮತ್ತು ಅಧಿಕಾರಿಗಳ ಬೆಂಬಲ ಬಗ್ಗೆ ಭಕ್ತರಿಗೆ ನಂಬಿಕೆ ಉಂಟಾಗಿದ್ದು, ಇದಕ್ಕೆ ದೇಣಿಗೆಯೂ ಅಪಾರವಾಗಿ ಹರಿದು ಬಂತು. ದೇಣಿಗೆಯನ್ನು ಸಮರ್ಪಕವಾಗಿ ಬಳಸಿಕೊಂಡ ಪರಿಣಾಮ 4.5 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಂಡ ಜೋಡು ರಥಗಳ ರಥೋತ್ಸವ ಮೊದಲಬಾರಿಗೆ ಶ್ರದ್ಧಾಭಕ್ತಿ ಹಾಗೂ ವಿಜೃಂಭಣೆಯಿಂದ ಜರುಗಿತು.

ಮೊದಲ ರಥೋತ್ಸವದಲ್ಲಿ ಶ್ರೀ ಲಕ್ಷ್ಮೀನಾರಾಯಣಸ್ವಾಮಿ ರಥದ ಪಟದ ಹರಾಜನ್ನು ಮಿಲ್ಟ್ರಿ ಮಂಜುನಾಥ ಅವರು 8 ಲಕ್ಷ ರೂಗೆ ಪಡೆದರು, ಶ್ರೀ ಆಂಜನೇಯ ಸ್ವಾಮಿ ರಥದ ಪಟದ ಹರಾಜನ್ನು ಕೆ.ಬಾಲರಾಜು 12.10 ಲಕ್ಷ ರೂಗೆ ಪಡೆದು ಭಕ್ತಿ ಮೆರೆದರು.







ಸರ್ಕಾರದ ಅನುದಾನ ಪಡೆಯದೇ, ಭಕ್ತರಿಂದಲೇ ದೇಣಿಗೆ ಸಂಗ್ರಹಿಸಿ ಭಕ್ತವೃಂದವೇ ಮೆಚ್ಚುವಂಥ ಜೋಡು ರಥ ನಿರ್ಮಾಣದ ಕಾರ್ಯ ಭಕ್ತರಿಂದ ನಡೆದಿದೆ. ಭಕ್ತರ ಇಚ್ಛೆಗೆ ಜಿಲ್ಲಾಡಳಿತ ಸಂಪೂರ್ಣ ಸಹಕಾರ ನೀಡಿದೆ. ಭಕ್ತಾಧಿಗಳು ಅಧಿಕಾರಿಗಳ ಮೇಲಿಟ್ಟ ಭರವಸೆ ಮತ್ತು ಜಿಲ್ಲಾಡಳಿತದೊಂದಿಗೆ ನಡೆಸಿದ ಪ್ರಾಮಾಣಿಕ ಪ್ರಯತ್ನಗಳೆಲ್ಲವೂ ಫಲಕಾರಿಯಾದವು. ಸ್ವಾರ್ಥವಿಲ್ಲದೆ ಸಮಾಜಕ್ಕಾಗಿ ದುಡಿಯುವ ಮನಸ್ಸುಗಳಿಗೆ ದೇವರ ಆಶೀರ್ವಾದ ಸದಾ ಇರುತ್ತದೆ ಎಂಬುದಕ್ಕೆ ಜೋಡು ರಥಗಳ ನಿರ್ಮಾಣ ಕಾರ್ಯವೇ ಸಾಕ್ಷಿ. ಭಕ್ತರು ಅಪಾರ ಪ್ರಮಾಣದಲ್ಲಿ ದೇಣಿಗೆ ನೀಡಿದ್ದು ಪಾರದರ್ಶಕತೆ ಕಾಯ್ದುಕೊಳ್ಳಲಾಗಿದೆ. ಜಿಲ್ಲೆಯ ಯಾವುದೇ ಭಾಗದಲ್ಲಿ ಭಕ್ತರು ಸ್ವಯಂಪ್ರೇರಿತವಾಗಿ ಮತ್ತಷ್ಟು ಧಾರ್ಮಿಕ ಅಭಿವೃದ್ಧಿ ಕಾರ್ಯಗಳಿಗೆ ಕೈಜೋಡಿಸಿದರೆ ಜಿಲ್ಲಾಡಳಿತ ದಿಂದ ಸಂಪೂರ್ಣ ಸಹಕಾರ ಸದಾ ಇರಲಿದೆ.

– **ಎಂ.ಎಸ್.ದಿವಾಕರ** ಜಿಲ್ಲಾಧಿಕಾರಿ, ವಿಜಯನಗರ.



ದೇವರ ಆಶೀರ್ವಾದ, ಜಿಲ್ಲಾಧಿಕಾರಿಗಳ ಮಾರ್ಗದರ್ಶನ, ಶಾಸಕರ ಮತ್ತು ಭಕ್ತರ ಸಹಕಾರದಿಂದ ಜೋಡು ರಥ ನಿರ್ಮಾಣಗೊಂಡಿವೆ. ಪ್ರಾಮಾಣಿಕತೆ ಮತ್ತು ಪಾರದರ್ಶಕತೆ ಮೈಗೂಡಿಸಿಕೊಂಡು ಕಾರ್ಯ ನಿರ್ವಹಿಸಿದಾಗ ಜನರ ಬೆಂಬಲ ಸಿಗುತ್ತದೆ. ಅನೇಕರ ಹಿರಿಯರು ನಮ್ಮೊಂದಿಗೆ ಕೈಜೋಡಿಸಿದ್ದಾರೆ. ಗಣಿಮಾಲೀಕರಾದ ಶ್ಯಾಮ್‌ಸಿಂಗ್ ಅವರು 2 ಕೋಟಿ ರೂ ನೀಡಿ ದೈವಿಕಾರ್ಯಕ್ಕೆ ಬಲತುಂಬಿದರು. ಹಾಗೇಯೆ ಅವರ ಸಹೋದರ ಜಯರಾಜ್ ಸಿಂಗ್ 50 ಲಕ್ಷ ರೂ ನೀಡಿದರು. ಜನರಲ್ಲಿ ನಂಬಿಕೆ ಹೆಚ್ಚಿತು. ಸುಮಾರು 5 ಕೋಟಿ ರೂ ವೆಚ್ಚದಲ್ಲಿ ಜೋಡು ರಥ ಮತ್ತು ಶಿಲಾಮಯದ ದೇವಸ್ಥಾನವಾಗಿ ನವೀಕರಣ ಕಾರ್ಯ ನೆರವೇರಿದೆ. ಭಕ್ತರಲ್ಲಿ ಹರ್ಷ ಮನೆ ಮಾಡಿದೆ.

– **ಸತೀಶ್ ಚಿದ್ರಿ** ಮುಖಂಡರು ಮರಿಯಮ್ಮನಹಳ್ಳಿ



ಮರಿಯಮ್ಮನಹಳ್ಳಿಯ ಜೋಡು ತೇರುಗಳು 700 ವರ್ಷಗಳ ಹಳೆಯದಾಗಿವೆ. ಇತ್ತೀಚೆಗೆ ತೇರುಗಳ ಅವಘಡಗದಿಂದಾಗಿ ಜೋಡು ತೇರಿಗೆ ಫಿಟ್‌ನೆಸ್ ಸರ್ಟಿಫಿಕೇಟ್ ದೊರೆಯವುದು ಕಷ್ಟ ಎಂಬುದನ್ನು ಅರಿತ ಇಲ್ಲಿನ ಭಕ್ತರು ಹೊಸ ತೇರು ನಿರ್ಮಾಣಕ್ಕೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಸಂಸದ ದೇವೇಂದ್ರಪ್ಪ, ಶಾಸಕ ನೇಮಿರಾಜ ನಾಯ್ಕ ಅವರಿಗೆ ತಳವಾರ ದೊಡ್ಡರಾಮಣ್ಣನವರು ಮನವಿ ಮಾಡಿದ್ದರು. ಜಿಲ್ಲಾಧಿಕಾರಿ ದಿವಾಕರ ಅವರು ನಮ್ಮೂರಿಗೆ ಬಂದು ಅರಳಿಕಟ್ಟೆಯ ಕೆಳಗೆ ಕುಳಿತು ಭಕ್ತರ ಅಭಿಪ್ರಾಯಗಳನ್ನು ಪಡೆದು, ಸೂಕ್ತ ಸಲಹೆ ಜೊತೆಗೆ ಹೃದಯಪೂರ್ವಕ ಸಹಕಾರ ಮಾರ್ಗದರ್ಶನ ನೀಡಿದರು. ಜಿಲ್ಲಾಧಿಕಾರಿ ಮಾರ್ಗದರ್ಶನದಲ್ಲಿ ಎಂತಹ ಕಠಿಣ ಕೆಲಸಗಳನ್ನಾದರೂ ಸುಲಭವಾಗಿ ಮಾಡಬಹುದು ಎಂಬುದಕ್ಕೆ ಜೋಡಿ ರಥಗಳ ನಿರ್ಮಾಣವೇ ಸಾಕ್ಷಿ. ಶಾಸಕರು ಮತ್ತು ಭಕ್ತರ ಅವಿರತ ಶ್ರಮ ಹಾಗೂ ಭಕ್ತರ ನೀಡಿದ ಬೆಂಬಲದಿಂದಾಗಿ ನಮ್ಮ ಭಾಗದ ಭಕ್ತರ ಕನಸು ನನಸಾಗಿದೆ.

– **ಗೋವಿಂದ ಪರಶುರಾಮ** ಮುಖಂಡರು, ಮರಿಯಮ್ಮನಹಳ್ಳಿ



## ಬೆಳಕಿನ ಹಾದಿ

# ಪಾಲಕರ ಕರ್ತವ್ಯವೇನು?

■ ದೀಪಶ್ರೀ ಎಸ್ ಕೂಡ್ಲಿಗಿ



ಅವನೊಬ್ಬ ಶ್ರೀಮಂತ ವ್ಯಾಪಾರಿ. ಕಾಯಕದಲ್ಲಿ ವಜ್ರೋದ್ಯಮಿ. ಸುಂದರ ಮಡದಿ. ವೈಭವಕ್ಕೇನು ಕೊರತೆ ಇರಲಿಲ್ಲ. ಕೊರತೆಯಿದ್ದದ್ದು ಒಂದೇ. ಮದುವೆಯಾಗಿ ಹತ್ತು ವರ್ಷ ಕಳೆದರೂ ಮಕ್ಕಳಾಗಲಿಲ್ಲ ಎಂಬುದು. ಇದಕ್ಕಾಗಿ ದಂಪತಿಗಳಿಬ್ಬರೂ ಮಾಡದೇ ಇರುವ ಪೂಜೆಯಿಲ್ಲ, ಸುತ್ತದೆ ಯಿರುವ ದೇವಸ್ಥಾನಗಳಿಲ್ಲ. ಹತ್ತು ವರ್ಷದ ನಂತರ ಪೂಜೆಯ ಫಲವೊ ಅಥವಾ ಅವರು ಮಾಡಿದ ಪುಣ್ಯದ ಫಲವೊ ಗಂಡು ಮಗುವನ್ನು ದೇವರು ಫಲವಾಗಿ ಕರುಣಿಸಿದ. ದೀರ್ಘಕಾಲದ ನಂತರ ಜನಿಸಿದ ಮಗುವನ್ನು ತಂದೆ–ತಾಯಿ ಇಬ್ಬರು ಅತಿಯಾಗಿ ಪ್ರೀತಿಸಿದರು. ಹೆಚ್ಚಾಗಿ ಮುದ್ದಿಸಿದರು, ಮಗ ಕೇಳಿದ್ದನ್ನೇಲ್ಲಾ ತಂದುಕೊಟ್ಟರು, ಒಳ್ಳೆಯ ಶಾಲೆಯಲ್ಲಿ ಓದಿಸಿದರು, ಮಗನು ತಪ್ಪು ಮಾಡಿದರು ಒಂದು ಮಾತು ಬಯ್ಯಲಿಲ್ಲ. ಒಂದು ಏಟು ಹೊಡೆಯಲಿಲ್ಲ. ಮಗನ ಕೋಪಕ್ಕೆ, ತಾಪಕ್ಕೆ, ಹಠಕ್ಕೆ ಒಬ್ಬನೇ ಮಗ ಇರಲಿ ಬಿಡು, ಹೋಗಲಿ ಬಿಡು ಎಂದು ಮಾಡಿದ ತಪ್ಪನ್ನೆಲ್ಲ ಮನ್ನಿಸಿದರು ಕ್ಷಮಿಸಿದರು.

ಈ ಪ್ರತಿಯಾಗಿ ಮಗನು ಸಹ ಬೆಳೆದು ದೊಡ್ಡವನಾಗಿ ಒಳ್ಳೆಯ ಉದ್ಯೋಗದಲ್ಲಿ ಸೇರಿಕೊಂಡ. ಅಲ್ಲಿಯೇ ಪರಿಚಯವಾದ ಸುಂದರ ಯುವತಿಯನ್ನು ಪ್ರೀತಿಸಿ, ಅವಳನ್ನೆ ಮದುವೆಯಾಗಲು ನಿರ್ಧರಿಸಿದ. ಮದುವೆಯಾಗಲು ತಂದೆ–ತಾಯಿ ಒಪ್ಪಿಗೆ ಕೇಳಿದ. ಬಾಲ್ಯದಿಂದ ಯೌವನಾವಸ್ಥೆವರೆಗೆ ಎಷ್ಟೇಲ್ಲಾ ಕೊಡಿಸಿದ ತಂದೆ–ತಾಯಿಗಳು ಮಗನು ಪ್ರೀತಿಸಿ ವರಿಸುವ ಮದುವೆಗೆ ಒಲ್ಲೆ ಎನ್ನುತ್ತಾರೆಯೇ? ಸುತಾರಾಂ ಇಲ್ಲ. ತಂದೆ–ತಾಯಿ ಒಪ್ಪಿಗೆ ಹಿನ್ನಲೆಯಲ್ಲಿ, ಭರ್ಜರಿಯಾಗಿ ಮದುವೆ ಮಾಡಿ ಕೊಂಡ. ಆರಂಭದಲ್ಲಿ ಎಲ್ಲವೂ ಸರಿಯಾಗಿತ್ತು. ದಿನಕಳೆದಂತೆ ಮಗ ಹೆತ್ತವರನ್ನು ಮೂಲೆಗುಂಪು ಮಾಡಿದ. ತಂದೆ–ತಾಯಿಯರನ್ನು ನಿಷ್ಕರುಣೆಯಿಂದ ನಡೆಸಿಕೊಳ್ಳುತ್ತಿದ್ದ. ಮಗನನ್ನು ಅಂಧರಾಗಿ ಪ್ರೀತಿಸುತ್ತಿದ್ದವರು ಎಲ್ಲ ನೋವನ್ನು ನುಂಗಿಕೊಂಡರು. ಎಷ್ಟೇ ಆದರೂ ಹೊಟ್ಟೆಯಲ್ಲಿ ಹುಟ್ಟಿದ ಮಗ



ಅಲ್ಲವೇ ಎಂದು ಅವಮಾನವನ್ನು ಸಹಿಸಿಕೊಂಡರು. ಒಳ್ಳೆಯ ಕಾರ್ಯಕ್ಕೆ ಹೋಗಳುತ್ತಾ, ಕೆಟ್ಟ ಕಾರ್ಯಕ್ಕೆ ತೆಗಳದೇ ಮಗನನ್ನು ಅತಿಯಾದ ಮುದ್ದಿನಿಂದ, ಮೂರ್ಖತನದಿಂದ ಸಾಕಿದರು, ಸಲುಹಿದರು. ಪರಿಣಾಮವಾಗಿ. ಮಗ ಅವರ ಆಸ್ತಿಯನ್ನು ಬರೆಸಿಕೊಂಡು ಹೆತ್ತವರನ್ನು ಹೊರದೂಡಿದ. ನಿರ್ಗತಿಕ ತಂದೆ–ತಾಯಿ ತಮ್ಮ ತಪ್ಪಿಗೆ ತಾವೇ ಶಪಿಸುತ್ತ, ಕಣ್ಣೀರು ಹಾಕುತ್ತ ವೃದ್ಧಾಶ್ರಮಕ್ಕೆ ನಡೆದರು.

ಅದಕ್ಕೆ ಚಾಣಕ್ಯ ಹೇಳಿರುವುದು "ಮಕ್ಕಳನ್ನು ಐದು ವರ್ಷಗಳವರೆಗೆ ಮುದ್ದಿಸಬೇಕು ನಂತರ ಮುಂದಿನ ಹತ್ತು ವರ್ಷಗಳವರೆಗೆ ದಂಡಿಸಬೇಕು ಹಾಗೂ ಹದಿನಾರನೇ ವಯಸ್ಸಿಗೆ ಬಂದ ನಂತರ ಮಿತ್ರರಂತೆ ಕಾಣಬೇಕು". ಆಯಾ ವಯಸ್ಸಿಗೆ ತಕ್ಕಂತೆ ಮಕ್ಕಳನ್ನು ಬೆಳೆಸುವ ಬಗ್ಗೆ ಜ್ಞಾನ ಹೊಂದಿರುವುದು ಪಾಲಕರ ಆದ್ಯ ಕರ್ತವ್ಯವಾಗಿರುತ್ತದೆ. ಮಕ್ಕಳ ಒಳ್ಳೆ ಕಾರ್ಯಕ್ಕೆ ಹೊಗಳದೇ, ಕೆಟ್ಟ ಕಾರ್ಯಕ್ಕೆ ತೆಗಳದೇ, ಅವರು ಮಾಡುವ ಎಲ್ಲ ಕೆಲಸಗಳನ್ನು ಮೂಕ ಪ್ರೇಕ್ಷಕರಂತೆ ನೋಡುವುದು, ಹಾಗೂ ಒಪ್ಪಿಕೊಳ್ಳುವುದು ಎರಡು ತಪ್ಪು. ಇದರಿಂದ ಮಕ್ಕಳು ತಂದೆ ತಾಯಿಗೆ ಕಂಟಕಪ್ರಾಯರಾಗುವುದಲ್ಲದೇ ಲೋಕಕ್ಕೆ ಕಂಟಕಪ್ರಾಯರಾಗುತ್ತಾರೆ. ಮಕ್ಕಳ ಮೇಲಿನ ಪ್ರೀತಿಗೆ ಅವರು ಮಾಡಿದ್ದೆ ಸರಿ, ಅವರು ಮಾಡಿದ್ದೇಲ್ಲ ಸರಿ ಎನ್ನುವ ಮನೋಭಾವ ಸಲ್ಲದು. ಇದರಿಂದ ಸ್ವಹಾನಿ ಪರಹಾನಿ. ಮಕ್ಕಳ ಸದ್ಗುಣಕ್ಕೆ ಶಹಬ್ಬಾಶ್ಗಿರಿ ಕೊಟ್ಟು, ದುರ್ಗುಣಕ್ಕೆ ಶಿಕ್ಷೆ ಕೊಡಬೇಕು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಇಂದಿನ ತಾಂತ್ರಿಕ ವಿದ್ಯಮಾನಗಳು ನಮ್ಮ ಮಕ್ಕಳ ಸಂಸ್ಕಾರ ಶಿಕ್ಷಣಕ್ಕೆ ತೊಡಕಾಗಿವೆ. ಅಶ್ಲೀಲವಾದ ವಿಡಿಯೋ, ಮಾತುಕತೆಗಳು, ಸೆಕ್ಸ್ ಸಂಬಂಧಿತ ಕತೆಗಳು ಎಲ್ಲರಿಗೂ ದಕ್ಕುವಂತೆ ಅವರ ಮನೋಕಾಮನೆಗಳು ಕ್ರೂರವಾಗುವಂತೆ ಮಾಡಿವೆ. ಮೌಲ್ಯವಿಲ್ಲದೆ ಸಮಾಜ ಘಾತುಕರಾಗಿ ಕೆಲ ಮಕ್ಕಳು ಬೆಳೆಯುತ್ತಿದ್ದಾರೆ. ನಾವು ಮಾತ್ರ ಯುವಕರು ಹಳಿ ತಪ್ಪುತ್ತಿದ್ದಾರೆ. ಧರ್ಮ, ಜಾತಿ, ಸಮಾಜ ಶುದ್ಧವಾಗಬೇಕು ಅನ್ನೋ ಪಾಠವನ್ನು ಮಾಡುತ್ತಿದ್ದೇವೆ. ಈ ಮೊದಲು ಆಧುನಿಕ ತಾಂತ್ರಿಕ ಸಾಧನಗಳು ನಿರೂಪಿಸುತ್ತಿರುವ ಹತ್ತು ಹಲವು ಅನೈತಿಕ ಮತ್ತು ಅಶ್ಲೀಲವಾದ ಲೋಕದೃಷ್ಟಿಯನ್ನು ನಿಲ್ಲಿಸುವ ಕಡೆಗೆ ಗಮನ ಹರಿಸಿದರೆ ನಾವು ಸಮಾಜ ಜೀವಿಯಾಗಿ ಬದುಕಬಹುದು....

# ಯುವಕರ ಬದುಕನ್ನೆ ನುಂಗುತ್ತಿರುವ ಆನ್ಲೈನ್ ಅಪರಾಧ

ಸುಳ್ಳು, ಮೋಸ, ದರೋಡೆಗಳನ್ನು ಮನುಷ್ಯ ಒಂದಲ್ಲ ಒಂದು ಕಾಲದಲ್ಲಿ ಮಾಡಿಕೊಂಡು ಬಂದಿದ್ದಾನೆ. ಇದು ಅವನಿಗೆ ಆದರ್ಶವಲ್ಲ ಅನ್ನಿಸಿದಾಗ ಸತ್ಯ, ನ್ಯಾಯಪರತೆಯ ಕಡೆಗೆ ಹೆಜ್ಜೆ ಇಟ್ಟಿದ್ದು ಲೋಕ ದೃಷ್ಟಿಯ ವಿಕಾಸದ ದಾರಿಯಾಗಿದೆ ಆದರೂ ಅಪರಾಧವೇ ಇಲ್ಲದ ಊರು ಇಲ್ಲ. ಸತ್ಯವನ್ನೇ ನಂಬಿ ಬದುಕುವವರು ನೂರರಲ್ಲಿ ಹತ್ತು ಜನ ಇರಬಹುದು. ಹಣದಲ್ಲಿ, ಉದ್ಯೋಗದಲ್ಲಿ, ಕೂಲಿಯಲ್ಲಿ, ಬಡ್ಡಿಯಲ್ಲಿ, ಮಾತಿನಲ್ಲಿ, ಅಳತೆಯಲ್ಲಿ, ಸಂಬಂಧದಲ್ಲಿ ವಂಚಿಸುವವರು ಹುಟ್ಟುತ್ತಿದ್ದಾರೆ ಮತ್ತು ಸಾಯುತ್ತಿದ್ದಾರೆ. ವಂಚನೆ ಅನ್ನುವುದು ಮನುಷ್ಯನ ಮೂಲ ಗುಣದಲ್ಲಿ ಒಂದು. ಕೆಲವು ಮಂದಿ ಎದುರಿನಲ್ಲಿ ವಂಚಿಸಿದರೆ ಇನ್ನು ಬಹುತೇಕರು ಹಿಂದೆಯಿಂದ ವಂಚಿಸುತ್ತಾರೆ. ಮೋಸ–ವಂಚನೆಯಿಂದ ವ್ಯಕ್ತಿ ಮುಕ್ತನಾಗಬೇಕು ಅನ್ನೋ ಕಾರಣ ದಿಂದ ಧರ್ಮ, ದೇವರು, ನೀತಿ, ನಿಯಮ, ಕಾನೂನು, ಶಿಕ್ಷೆ ಅಂಬೋದೆಲ್ಲ ನಮ್ಮ ನಡುವೆ ನಡೆದಾಡುತ್ತಿದ್ದರೂ ಇವುಗಳು ನಿಂತಿಲ್ಲ ಅಂದರೆ ಅದೆಷ್ಟೋ ಮಂದಿ ಇಂತಹ ವಂಚನೆಯನ್ನೇ ತಮ್ಮ ವೃತ್ತಿಯಾಗಿ, ಪ್ರವೃತ್ತಿಯಾಗಿ ಇಟ್ಟುಕೊಂಡಿದ್ದಾರೆ ಅನ್ನೋದು ಅರ್ಥವಾಗುತ್ತದೆ.

ಮುಖ್ಯವಾಗಿ ನಮ್ಮ ಬದುಕಿನ ಭೌತಿಕ ಸಂಸ್ಕೃತಿಯ ಜೊತೆಯಲ್ಲಿ ಮೋಸ, ವಂಚನೆಗಳು ನಡೆದು ಜಗಳ, ಹೊಡೆದಾಟ, ಕೇಸು, ಕೋರ್ಟು, ಜೈಲುಗಳು ಎದುರುಗೊಂಡದ್ದು ಪ್ರತಿಯೊಬ್ಬನಿಗೂ ಅರಿವಿದೆ. ಇಲ್ಲಿ ಅಪರಾಧ ಏನು? ಈ ಅಪರಾಧಕ್ಕೆ ಶಿಕ್ಷೆ ಯಾವುದು ಅನ್ನೋದು ತಿಳುವಳಿಕೆಯ ಭಾಗವಾಗಿರುತ್ತದೆ. ಆದರೆ ಇಂದಿನ ದಿನಮಾನದಲ್ಲಿ ನಮ್ಮ ದುಡಿಮೆ, ಹಣಕಾಸಿನ ಚಲನೆ, ವ್ಯವಹಾರ, ಮನರಂಜನೆ ಎಲ್ಲವೂ ಅನ್ಲೈನ್ ಆಗಿರುವ ಕಾರಣ ಆನ್ಲೈನ್ ಅಪರಾಧಗಳು ದಿನವು ಏರುತ್ತಿರುವುದನ್ನು ಗಮನಿಸ ಬಹುದು. ಮಕ್ಕಳಿಂದ ಹಿಡಿದು ಮುದುಕರ ತನಕ ಲಿಂಗ–ಜಾತಿ, ವರ್ಗ, ವರ್ಣದ ಬೇಧವಿಲ್ಲದೆ ಪ್ರತಿಯೊಬ್ಬರು ಮೊಬೈಲ್ ಬಳಸುವುದು ಮತ್ತು ಅದರಲ್ಲಿಯೇ ತನ್ನ ವ್ಯವಹಾರವನ್ನು ನಿರೂಪಿಸುವ, ರೂಪಿಸುವ ಕಾರ್ಯವನ್ನು ಮಾಡುತ್ತಿದ್ದಾರೆ. ಈ ನಡುವೆ ಅನ್ಲೈನಲ್ಲಿ ಮನುಷ್ಯರನ್ನು ಮೋಸ ಮಾಡಿ ಹಣ ಗಳಿಸುವ ಅನೇಕ ತಂತ್ರಗಳು ಹುಟ್ಟಿಕೊಂಡವು. ದೇಶ–ಗಡಿಯನ್ನು ಮೀರಿದ ಗುರುತು ಪರಿಚಯವೇ ಇಲ್ಲದ ಅಷ್ಟೋ ಜನ ಇಂತಹ ಮೋಸದ ಜಾಲದಲ್ಲಿ ತೊಡಗಿಕೊಂಡಿರುವುದು ನಾವು ಮೋಸ ಹೋದಾಗ ತಮ್ಮ ಅರಿವಿಗೆ ದಕ್ಕುತ್ತದೆ.



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು
Scan For Digital Colourful
HAMPI TIMES E-paper



ಮೊಬೈಲ್ ಅಥವಾ ಕಂಪ್ಯೂಟರಿನ ಪರದೆಯನ್ನು ಬಿಡಿಸಿದ ಕೂಡಲೇ ಅನೇಕ ಲಿಂಕುಗಳು, ಜಾಹೀರಾತುಗಳು ನಮ್ಮನ್ನು ಸೆಳೆಯುವುದಿದೆ. ಏನಿದೆ ಅಂತ ನೋಡಬೇಕು ಅನ್ನಿಸುವಷ್ಟು ಕುತೂಹಲವನ್ನು ಹುಟ್ಟು ಹಾಕುವಷ್ಟು ಶಕ್ತಿ ಶಾಲಿಯನ್ನು ಪಡೆದಿವೆ. '0% ನಲ್ಲಿ ಎರಡು ಲಕ್ಷದ ವರೆಗೆ ಯಾವುದೇ ದಾಖಲೆಗಳಿಲ್ಲದೆ ಸಾಲ ಬೇಕೆ, ಇಂದೇ ಪಡೆಯಿರಿ. ಈ ಮೊದಲು ಇಲ್ಲಿ ಕಾಣುವ ಗುರುತಿಗೆ ಟಚ್ ಮಾಡಿ' ಅಂತ ತೋರಿಸುತ್ತದೆ. ಹಣದ ಅಗತ್ಯ ಕಷ್ಟಗಳು ಗಂಟಲಿಗೆ ಸಿಕ್ಕಾಗ ಯಾವ ಮನುಷ್ಯ ತಾನೇ ಸುಮ್ಮನಿರುತ್ತಾನೆ. ಯಾವುದೇ ಬ್ಯಾಂಕಿಗೆ ಹೋಗಿ ಒಂದು ಲಕ್ಷ ಸಾಲ ಕೇಳಿದರೆ ನೂರೆಂಟು ಸಹಿ, ದಾಖಲೆಗಳನ್ನು ಕೇಳುತ್ತಾರೆ. ವಾರ ಸಮಯ ಹಿಡಿಯುತ್ತದೆ ಏನೆಲ್ಲ ಕ್ರಮಗಳುಂಟು. ಆದರೆ ಇಲ್ಲಿ ಹಾಗಲ್ಲ ಮೊಬೈನಲ್ಲಿ ತೋರಿಸಿದಂತೆ ಒತ್ತುತ್ತ ಹೋದರಾಯಿತು. ಅಲ್ಲಿ ಏನುಂಟು ಅನ್ನೋ ವಿವೇಕ ನಮಗಿಲ್ಲ. ಕೊನೆಗೆ ಹಣವು ಅದರಲ್ಲೂ ಸಿಗದಿದ್ದಾಗ ನಮ್ಮ ಹಣೆ ಬರೆಹ ಅಂತ ಸಮ್ಮನಾಗುತ್ತೇವೆ. ನಂತರ ಕೆಲವು ದಿನಗಳಲ್ಲಿ ನೀವು ಸಾಲಗಾರ ಅಂತ ಮನೆ ಮುಂದೆ ಯಾರೋ ನಾಲ್ಕ ಜನ ನಿಂತೋ, ಕರೆ ಮಾಡಿಯೋ ಸಾಲವನ್ನು ಕಟ್ಟಿ ಅಂದಾಗ ದಿಕ್ಕೇ ತೋಚುವುದಿಲ್ಲ. ಏನು ಮಾಡಬೇಕು ಅನ್ನೋ ಅರಿವೆ ಇರುವುದಿಲ್ಲ.

ಯುವಕರನ್ನು ಬಲೆಯಲ್ಲಿ ಸಿಕ್ಕಿಸಿ ಹಣ ಮಾಡುವ ಅನೇಕ ಆಪುಗಳು ಮೊಬೈಲಿನಲ್ಲಿ ತುಂಬಿ ತುಳುಕುತ್ತಿವೆ. ಸತ್ಯವೆಂದು ನಂಬಿರುವ ಬಹುತೇಕರು ಅದರ ಗೀಳಿಗೆ ಸಿಕ್ಕು ಹಣವನ್ನು ಕಳೆದುಕೊಂಡು ಅರೆಹುಚ್ಚರಾಗಿಯೇ ಮೋಹಕ ಲೋಕದಲ್ಲಿಯೇ ತೇಲುತ್ತಿದ್ದಾರೆ. ನಿಮ್ಮ ಆಯ್ಕೆಯ ಹುಡುಗಿಯೊಂದಿಗೆ ಮಾತನಾಡಿ, ಅವರು ನಿಮಗಾಗಿ ಎಲ್ಲವನ್ನು ಮಾಡುತ್ತಾರೆ; ರಾತ್ರಿ ಪೂರ್ತಿ ವಿಡಿಯೋ ಕರೆ ಮಾಡಿ ನಿಮ್ಮ ಒಂಟಿತನವನ್ನು ನೀಗಿಸಿಕೊಳ್ಳಿ; ಎನ್ನುವ ಅನೇಕ ಸಂಗತಿಗಳು ಸುಲಭವಾಗಿ ಎಲ್ಲರ ಮನಸ್ಸಿಗೆ ಸಿಗುವ ಕಾರಣ ಸಾಮಾಜಿಕ ಮೌಲ್ಯವು ತನ್ನ ಅಸ್ಮಿತೆಯನ್ನು ಕಳೆದಿದೆ ಅನ್ನೋದು ಗಮನಿಸಬೇಕು. ಮಕ್ಕಳು ಮೊಬೈಲಿನ ದಾಸರಾಗುವುದು ಅನೈತಿಕ ಚಟುವಟಿಕೆಗಳಿಗೆ ಇಳಿಯುವುದಕ್ಕೆ ಇದು ಒಂದು ಕಾರಣ ಅನ್ನುವುದನ್ನು ನಾವು ಮರೆಯುವುವಂತಿಲ್ಲ.

ನಾವು ಸಾಮಾನ್ಯವಾಗಿ ಗಮನಿಸಿದ ಸಂಗತಿ ಅಂದರೆ 'ನನ್ನ ಫೆಸ್ಬುಕ್ ಹ್ಯಾಕ್ ಆಗಿದೆ ಯಾರು ಸ್ಪಂದಿಸಬೇಡಿ' ಅನ್ನೋದು. ಆದರೆ ಬಹುತೇಕರು ಯಾರದ್ದೋ ಫೋಟೋ ಹಾಕಿ ಅನೇಕ ನಕಲಿ ಖಾತೆಗಳನ್ನು ಸೃಜಿಸಿ, ಹಣ ಲಪಟಾಯಿಸುವ ಮತ್ತು ನೀಚವಾದ, ಅಶ್ಲೀಲವಾದ ಪೋಟೋ ಹಾಕುವ ಕಮೆಂಟ್ಗಳನ್ನು ಬರೆಯುವುದನ್ನು ಗಮನಿಸುತ್ತೇವೆ ಇದು ಸಮಾಜದ ಸ್ವಾಸ್ಥ್ಯವನ್ನು ಹಾಳುಗೆಡವುತ್ತದೆ ಅನ್ನೋ ಪ್ರಜ್ಞೆನಮ್ಮ ಕಾನೂನಿಗೆ ಇಲ್ಲವೆ ಅನ್ನೋದು ಸಹ ಪ್ರಶ್ನೆಯಾಗಿ ನಿಲ್ಲುತ್ತದೆ. 'ನೀವು ಇಂತಹ ವ್ಯಕ್ತಿಗೆ ಸಾಲಕ್ಕೆ ಜಾಮೀನು ಹಾಕಿದ್ದೀರಿ ನಾನು ವಕೀಲ ಮಾತನಾಡುವುದು, ಪೋಲೀಸ್ ಮಾತನಾಡುವುದು ಹಣ ಕಟ್ಟಿ ನೀವು ಇರುವ ಜಾಗಕ್ಕೆ ಬಂದು ಗಲಾಟೆ ಮಾಡುತ್ತೇವೆ' ಅನ್ನೋ ಕರೆಗಳು. ಮನೆಯಲ್ಲಿಯೇ ಕುಳಿತು ಸಾವಿರಾರು ರೂಪಾಯಿ ಸಂಪಾದಿಸಿ ಅನ್ನೋ ಹಣೆಪಟ್ಟಿಯೊಂದಿಗೆ ನಮ್ಮ ಒಳಗೆ ಸೇರಿಕೊಂಡು ಸಾವಿರಾರು ರೂಪಾಯಿಯನ್ನು ಅಂಚೆಯ ವೆಚ್ಚ ಅದು ಇದು ಅಂತ ನಮ್ಮಿಂದ ಪೀಕಿಸುವ ಘಟನೆಗಳು ದಿನ ನಿತ್ಯ ನಡೆಯುತ್ತವೆ.

ಪೋಷಕರಿಗೆ ಕರೆ ಮಾಡಿ ನಿಮ್ಮ ಮಗ ಕಾಲೇಜಿನಿಂದ ಅರ್ಧಕ್ಕೆ ತಪ್ಪಿಸಿ ಬಂದು ಅವನ ಸ್ನೇಹಿತರ ಜೊತೆಯಲ್ಲಿ ಸೇರಿ ಒಂದು ಹುಡುಗಿಯನ್ನು ಅತ್ಯಾಚಾರ ಮಾಡಿದ್ದಾನೆ ಅವನನ್ನು ಪೋಲೀಸ್ ಠಾಣೆಯಲ್ಲಿ ಬಡಿಯುತ್ತಿದ್ದೇವೆ. ನಿಮಗೆ ನಿಮ್ಮ ಮಗ ಬೇಕಾದರೆ ಒಂದು ಲಕ್ಷ ಹಣವನ್ನು ಈಗಲೇ ಕಳಿಸಿ ಮನೆಗೆ ಬಿಡುತ್ತೇವೆ ಮುಂದೆ ಸಮಸ್ಯೆಯಾಗದಂತೆ ನೋಡಿಕೊಳ್ಳುತ್ತೇವೆ; ಅಂತ ಹೇಳಿ ಹೆದರಿಸಿ ಹಣ ಮಾಡುವ ಅದೆಷ್ಟೋ ವಿದ್ಯಮಾನಗಳು ನಡೆಯುತ್ತಿವೆ. ಇಲ್ಲಿ ನಾವು ಯೋಚಿಸಬೇಕಾದ ಮತ್ತು ಜಾಗೃತಗೊಳ್ಳಬೇಕಾದ ಅನೇಕ ಸಂಗತಿಗಳಿವೆ. ಇಂತಹ ನೂರಾರು ಅನ್ಲೈನ್ ಅಪರಾಧಗಳು ನಮ್ಮ ಮೊಬೈಲಿನಲ್ಲಿಜಾಗಪಡೆಯುವಂತೆಮಾಡಿರುವಬಂಡವಾಳಶಾಹಿತ್ವದ ನಿರೂಪಗಳ ಮೇಲೆ ಸರ್ಕಾರಗಳು ಬಿಗಿ ಮಾಡಬೇಕು. ಅಶ್ಲೀಲವಾದ ವಿಡಿಯೋ, ಮಾತುಕತೆಗಳು, ಸೆಕ್ಸ್ ಸಂಬಂಧಿತ ಕತೆಗಳು ಎಲ್ಲರಿಗೂ ದಕ್ಕುವಂತೆ ಅವರ ಮನೋಕಾಮನೆಗಳು ಕ್ರೂರವಾಗುವಂತೆ ಮಾಡುವ ಇಂತಹ ತಾಂತ್ರಿಕ ವಿದ್ಯಮಾನಗಳು ನಮ್ಮ ಮಕ್ಕಳ ಸಂಸ್ಕಾರ ಶಿಕ್ಷಣಕ್ಕೆ ತೊಡಕಾಗಿ ಅವರು ಮೌಲ್ಯವಿಲ್ಲದೆ ಸಮಾಜ ಘಾತುಕರಾಗಿ ಬೆಳೆಯುತ್ತಿದ್ದಾರೆ. ನಾವು ಮಾತ್ರ ಯುವಕರು ಹಳಿ ತಪ್ಪುತ್ತಿದ್ದಾರೆ ಧರ್ಮ, ಜಾತಿ, ಸಮಾಜ ಶುದ್ಧವಾಗಬೇಕು ಅನ್ನೋ ಪಾಠವನ್ನು ಮಾಡುತ್ತಿದ್ದೇವೆ. ಈ ಮೊದಲು ಆಧುನಿಕ ತಾಂತ್ರಿಕ ಸಾಧನಗಳು ನಿರೂಪಿಸುತ್ತಿರುವ ಹತ್ತು ಹಲವು ಅನೈತಿಕ ಮತ್ತು ಅಶ್ಲೀಲವಾದ ಲೋಕದೃಷ್ಟಿಯನ್ನು ನಿಲ್ಲಿಸುವ ಕಡೆಗೆ ಗಮನಕ್ಕೆ ಹರಿಸಿದರೆ ನಾವು ಸಮಾಜ ಜೀವಿಯಾಗಿ ಬದುಕಬಹುದು.

# ಬಡತನದಲ್ಲೂ ಅರಳಿದ ಪ್ರತಿಭೆ

## ನೆರವಿನ ನಿರೀಕ್ಷೆಯಲ್ಲಿ ಅಂತರಾಷ್ಟ್ರೀಯ ಪವರ್ ಲಿಫ್ಟರ್ ರೆಕ್ಸನ್

ಬಯಸದೇ ಬಂದ ಕ್ರೀಡಾ ಕಲೆಯನ್ನು ಬೆಳೆಸುವ ಸಲುವಾಗಿ ಅಮೆಜಾನ್ (ಆನ್ಲೈನ್)ನಲ್ಲಿ ಸೇಲ್ಸ್ ಬಾಯ್ ಕೆಲಸವನ್ನು ಮಾಡುತ್ತಾ ವರ್ಲ್ಡ್ ಚಾಂಪಿಯನ್ ಪದಕದ ಕನಸು ಕಾಣುತ್ತಿರುವ ರೆಕ್ಸನ್ ರವರಿಗೆ ಬೇಕಾಗಿದೆ ಆರ್ಥಿಕ ನೆರವು.

ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲೂಕಿನ ಹುಲುಮಕ್ಕಿ ಗ್ರಾಮದ ರೂಡಾಲ್ ನರೋನಾ,ಗ್ರೇಟ್ ನರೋನಾ ಇವರ ಪುತ್ರ.ಸದ್ಯ ಬೆಂಗಳೂರಿನಲ್ಲಿ ರೇವಾ ವಿಶ್ವವಿದ್ಯಾನಿಲಯದಲ್ಲಿ ಬಿಸಿಎ ಪದವಿಯನ್ನು ಓದುತ್ತಿದ್ದಾರೆ.

ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಬಿಜಿಎಸ್ ಶ್ರೀ ವೆಂಕಟೇಶ್ವರ ವಿದ್ಯಾಮಂದಿರ,ಪ್ರಾಥಮಿಕ ಮತ್ತು ಪಿ ಯು ಸಿ ವಿದ್ಯಾಭ್ಯಾಸವನ್ನು ಮಂಗಳೂರಿನ ಸೆಂಟ್ಅಲೋಸಿಯಸ್ ವಿದ್ಯಾಸಂಸ್ಥೆಯಲ್ಲಿ ಪೂರ್ಣಗೊಳಿಸಿರುತ್ತಾರೆ. ಸ್ನೇಹಿತರೊಂದಿಗೆ ಕುಂದಾಪುರದಲ್ಲಿ ನಡೆಯುತ್ತಿದ್ದ ಪವರ್ ಲಿಫ್ಟಿಂಗ್ ಸ್ಪರ್ಧೆಯನ್ನು ನೋಡಲು ತೆರಳಿದಾಗ ಈ ಕ್ರೀಡೆಯ ಮೇಲೆ ಮನಸಾಗಿ ಕಲಿಯಲು ಆರಂಭಿಸುತ್ತಾರೆ.


ಪ್ರಾರಂಭದಲ್ಲಿ ಕಬ್ಬಡಿ ಮತ್ತು ಕುಸ್ತಿಯಲ್ಲಿ ಒಲವು ಹೊಂದಿದ್ದ ಇವರು ಮುಂದೆ ಅಂತರಾಷ್ಟ್ರೀಯ ಮಟ್ಟದ ಪವರ್ ಲಿಫ್ಟರ್ ಆಗಲು ಚಂದ್ರನಾಥ್ ಶೆಟ್ಟಿ, ಜೆಬಿನ್ ವರ್ಗೀಸ್ ಮತ್ತು ಸತೀಶ್ ಕುಮಾರ್ ಕುದ್ರೋಳಿ ತರಬೇತಿ ನೀಡಿ ಸಹಕರಿಸಿದ್ದಾರೆ.

ತಂದೆಯವರು ಪ್ರೈವೇಟ್ ಕಂಪನಿಯಲ್ಲಿ ಸೇಲ್ಸ್ ಮೆನ್ ಆಗಿ ಕಾರ್ಯನಿರ್ವಹಿಸಿ ಈಗ ನಿವೃತ್ತಿ ಗೊಂಡಿದ್ದಾರೆ. ಮನೆ ಕಡೆ ಅಷ್ಟೊಂದು ಅನುಕೂಲ ವಿಲ್ಲದ ಕಾರಣ ನಾನೇ ದುಡಿದು ಸಂಜೆಯ ವೇಳೆಯಲ್ಲಿ ತರಬೇತು ಪಡೆಯ ಬೇಕಾಗಿದೆ.

ವಯಸ್ಸಾದ ತಂದೆ ತಾಯಿಗಳನ್ನು ನೋಡಿಕೊಳ್ಳುವುದರ ಜೊತೆ ಜೊತೆಗೆ ಕ್ರೀಡೆಯನ್ನು ಮುಂದುವರಿಸಬೇಕು ಯಾವುದನ್ನು ಬಿಡುವ ಮನಸ್ಸಾಗಲಿ ನನಗಿಲ್ಲ ಎರಡನ್ನು ನಿಭಾಯಿಸಲು ಸಾಕಷ್ಟು ಕಷ್ಟವೆನಿಸಿದ್ದರೂ ದಣಿಯುತ್ತಿದ್ದೇನೆ. ಪವರ್ ಲಿಫ್ಟಿಂಗ್ ಒಂದು ಶಕ್ತಿಯುತ ಕ್ರೀಡೆಯಾಗಿದ್ದು ಸಾಕಷ್ಟು ಉತ್ತಮ ಪೌಷ್ಟಿಕಾಂಶವುಳ್ಳ ಆಹಾರವನ್ನು ಸೇವಿಸ ಬೇಕಾಗುತ್ತದೆ, ವೈಜ್ಞಾನಿಕ ತರಬೇತಿ, ವಿಶ್ರಾಂತಿ ಪಡೆಯಬೇಕಾಗುತ್ತದೆ ಆದರೆ ಓದಿನೊಂದಿಗೆ ದಿನಗೂಲಿ ಯನ್ನು ಮಾಡುತ್ತಿದ್ದು ಇವುಗಳನ್ನು ನಿಭಾಯಿ ಸುವುದು ಸಾಕಷ್ಟು ಕಷ್ಟಕರವೆನಿ ಸುತ್ತಿದೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381
Scan For Digital Colourful
HAMPI TIMES E-paper



ಪವರ್ ಲಿಫ್ಟಿಂಗ್ ಕ್ರೀಡಾಕೂಟಗಳು ದೂರದ ವಿದೇಶಗಳಲ್ಲಿ ನಡೆಯುವುದರಿಂದ ಪ್ರಯಾಣ ಮಾಡಲು ಹಾಗೂ ಉತ್ತಮ ತರಬೇತಿ ಪಡೆಯಲು ಹಣದ ಅವಶ್ಯಕತೆ ಇದ್ದು ಅನಿವಾರ್ಯವಾಗಿ ದುಡಿಮೆ ಮಾಡಲೇ ಬೇಕಾಗಿದೆ.

ನಾನು ಈಗಾಗಲೇ ಸಾಕಷ್ಟು ಅಂತರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯಮಟ್ಟದ ಪ್ರಶಸ್ತಿ ಪದಕಗಳನ್ನು ಪಡೆದಿರುತ್ತೇನೆ ಆದರೆ ವಿದೇಶದಲ್ಲಿ ನಡೆಯುವ ವರ್ಲ್ಡ್ ಚಾಂಪಿಯನ್ಶಿಪ್‌ಗೆ ಹೋಗಲು ನನ್ನಿಂದ ಸಾಧ್ಯವಾಗುತ್ತಿಲ್ಲ ಕಾರಣ ಹಣ. ದೂರದ ದೇಶಕ್ಕೆ ಪ್ರಯಾಣ ಬೆಳೆಸಬೇಕಾದರೆ ಲಕ್ಷಗಳಲ್ಲಿ ಹಣದ ಅವಶ್ಯಕತೆ ಇರುತ್ತದೆ ಆದ್ದರಿಂದ ದಾನಿಗಳು ಸಹಕಾರ ನೀಡಬೇಕು ಎಂದು ವಿನಂತಿಸುತ್ತಾರೆ.

ಸರ್ಕಾರ ನಮ್ಮಂತ ಸಾಧಕರನ್ನು ಗುರುತಿಸುವ ಕೆಲಸ ಮಾಡಬೇಕಾಗಿದೆ. ಗುರುತಿಸಿ ಸಹಕರಿಸಿದರೆ ವಿಶ್ವ ಮಟ್ಟದಲ್ಲಿ ಪದಕಗಳಿಸಿ ಭಾರತದ ಕೀರ್ತಿಯನ್ನು ಹೆಚ್ಚಿಸುತ್ತೇವೆ.

### ರೆಕ್ಸನ್ ಕ್ರೀಡಾ ಸಾಧನೆಗಳು

2020(ನ್ಯೂಜಿಲೆಂಡ್) ಅಂತರಾಷ್ಟ್ರೀಯ ಪವರ್ ಲಿಫ್ಟಿಂಗ್ ಚಾಂಪಿಯನ್ಶಿಪ್ 93 ಕೆಜಿ ದೇಹ ತೂಕ ವಿಭಾಗದಲ್ಲಿ ಒಟ್ಟು 615 ಕೆಜಿ (ಡೆಡ್ಲಿ ಲಿಫ್ಟ್,ಬೆಂಚ್ ಪ್ರೆಸ್, ಸ್ಕ್ವಾಟ್) ತೂಕವನ್ನು ಎತ್ತುವ ಮೂಲಕ ಚಿನ್ನದ ಪದಕ ಪಡೆದಿರುತ್ತಾರೆ.

**2020(ನ್ಯೂಜಿಲ್ಯಾಂಡ್)ಅಂತರಾಷ್ಟ್ರೀಯ ಪವರ್ ಲಿಫ್ಟಿಂಗ್ ಕ್ಲಾಸಿಕ್ ವಿಭಾಗದಲ್ಲಿ 575 ಕೆಜಿ ಒಟ್ಟು ತೂಕವನ್ನು ಎತ್ತುವ ಮೂಲಕ 93 ಕೆಜಿ ದೇಹ ತೂಕ ವಿಭಾಗದಲ್ಲಿ ಕಂಚಿನ ಪದಕ.**

2022(ಹೈದ್ರಾಬಾದ್)ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಆಯೋಜಿಸಿದ ಸ್ಪರ್ಧೆಯಲ್ಲಿ 93 ಕೆಜಿ ದೇಹ ತೂಕ ವಿಭಾಗದಲ್ಲಿ ಒಟ್ಟು 620 ಕೆಜಿ ತೂಕ ಎತ್ತುವ ಮುಖಾಂತರ ಚಿನ್ನದ ಪದಕ.

**2022(ಕೇರಳ)ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಇವರ ಸಹಯೋಗದಲ್ಲಿ ನಡೆದ ಸ್ಪರ್ಧೆಯಲ್ಲಿ 93 ಕೆಜಿ ದೇಹ ತೂಕ ವಿಭಾಗದಲ್ಲಿ 545 ಕೆಜಿ ಒಟ್ಟು ತೂಕವನ್ನು ಎತ್ತುವ ಮುಖಾಂತರ ಚಿನ್ನದ ಪದಕ.**

2024(ಗೋವ)ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ ಇವರ ಸಹಯೋಗದಲ್ಲಿ ನಡೆದ ಸ್ಪರ್ಧೆಯಲ್ಲಿ ಭಾಗವಹಿಸಿ 105 ಕೆಜಿ ದೇಹ ತೂಕ ವಿಭಾಗದಲ್ಲಿ ಚಿನ್ನದ ಪದಕ ಪಡೆದಿರುತ್ತಾರೆ.

**2025 ಮೇ 17 ರಿಂದ 25 ರವರೆವಿಗೆ ನಾರ್ವೆ ಇಲ್ಲಿ ನಡೆಯಲಿರುವ ಇಂಟರ್ನ್ಯಾಷನಲ್ ಪವರ್ ಲಿಫ್ಟಿಂಗ್ ಫೆಡರೇಷನ್ ಆಯೋಜಿಸುವ ವಿಶ್ವ ಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಗೆ ಆಯ್ಕೆ ಆಗಿರುತ್ತಾರೆ.**

ಸಂಘ, ಸಂಸ್ಥೆಗಳು, ಪ್ರಾಯೋಜಕರು ನಮ್ಮಂತಹ ಸಾಧಕರಿಗೆ ನೆರವಾಗಬೇಕು. ಆಗ ಮಾತ್ರ ನಾವು ವಿಶಿಷ್ಟವಾಗಿ ಸಾಧನೆ ಮಾಡಲು ಸಾಧ್ಯವಾಗುತ್ತದೆ. ಪದಕ ಗೆದ್ದಾಗ ಮಾತ್ರ ಪತ್ರಿಕಾ,ಟಿವಿ ಮಾಧ್ಯಮದವರು ನಮ್ಮನ್ನು ಆಗ ಮಾತ್ರ ಪ್ರಚಾರ ಮಾಡಿ ಮರೆತು ಬಿಡುತ್ತಾರೆ. ದಯಮಾಡಿ ಮಾಧ್ಯಮ ವರ್ಗದವರು ನಮ್ಮಂತವರನ್ನು ಸರ್ಕಾರದ ಗಮನಕ್ಕೆ ಬರುವಂತೆ ಮಾಡಬೇಕು ಎಂದು ವಿನಂತಿಸಿಕೊಳ್ಳುತ್ತಾರೆ.

ಕಾಮನ್ ವೆಲ್ತ್ ಕ್ರೀಡಾಕೂಟದಲ್ಲಿ ಕೂಟದ ದಾಖಲೆ ಮಾಡಿದ್ದು ವಿಶ್ವ ಚಾಂಪಿಯನ್ಶಿಪ್ ನಲ್ಲಿ ದೇಶಕ್ಕೆ ಪದಕ ತರುವುದೇ ನನ್ನ ಗುರಿ ಎನ್ನುತ್ತಾರೆ ರೆಕ್ಸನ್ (ಸಹಾಯಕ ಮಾಡಲಿಚ್ಚಿಸುವವರು ಸಂಪರ್ಕಿಸಬಹುದು –ಮೊ:7338142992)

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಆಧ್ಯಾತ್ಮ

ಸಾಧನೆಯಲ್ಲಿರಲಿ ನಮಗೆ ತಾದ್ಯಾತ್ಮ
ಪ್ರತಿ ನಡೆಯಲೂ ಮಿಡಿಯಲಿ ಆಧ್ಯಾತ್ಮ
ಅರಿವನು ಕಾಣಲಿ ಪ್ರತಿ ಜೀವಾತ್ಮ
ಜಗದ ನಿಯಾಮಕನೇ ಪರಮಾತ್ಮ

ಲೋಕದ ದ್ವಂದ್ವವ ಮೀರಿ
ಪರ ತತ್ವವನು ಸಾರಿ
ಸಂಸಾರದ ಸುಳಿಯು ಭಾರಿ
ಕಾಣು ಗುರುಕೃಪೆಯಲಿ ದಾರಿ

ಅನುಭವದಿ ಮನ ಮಾಗಿ
ಅನುಭಾವದ ದಾರಿ ಸಾಗಿ
ಭಗವಂತನ ಹೆಸರನೇ ಕೂಗಿ
ನಿತ್ಯಸತ್ಯವ ಅರಿತವನೇ ಯೋಗಿ

**– ಚೇತನ ಭಾರ್ಗವ ಬೆಂಗಳೂರು**

### ಮಗು...

ಎದುರಿನೆಲ್ಲರ ಮೆಚ್ಚಿಸಲು
ಒಲ್ಲದವರ ಕಿಚ್ಚು ಹೆಚ್ಚಿಸಲು

ದಿನವೂ ತೇಯಬೇಕಿಲ್ಲ
ನಿನ್ನೊಳಗೆ ನೀನಿರದೆ ಸಾಯಬೇಕಿಲ್ಲ

ಹೂ ನಗು ಹುಡುಕಾಟ ಹುಡುಗಾಟಗಳು
ಕನಲಿ ಹೋಗದಿರಲಿ ಕಾಲದಲಿ ಲೀನವಾಗಿ

ಜೀವನದ ಆಟದಲ್ಲಿ ಸ್ಪರ್ಧೆ ಇಣುಕದಿರಲಿ
ಆಜು ಬಾಜು
ಬದುಕಿನೋಟದಲಿ ತಲೆದೋರಿದರೂ
ಏರಿಳಿತದ ಗೋಜು

ಸಕಲವೂ ನಿಲುಕಬೇಕೆನ್ನುವ ಕ್ಷುಲ್ಲಕ
ಬಯಕೆ
ಮೌಲ್ಯವ ಕಳೆದುಕೊಂಡಾಗದಿರಲಿ ಕುಣಿಕೆ

ಅಪರಿಚಿತ ನೋವಿಗೆ ಕೊರಗು
ಪರಿಚಿತ ಸಣ್ಣತನಗಳಿಗೆ ಮರುಗು

ಎದುರಿಗಿದ್ದವರಿಗೊಂದು ಮುಗುಳ್ನಗು
ಗೆದ್ದವರಿಗೊಂದು ಚಪ್ಪಾಳೆ ಮೆರಗು
ನೀನಾಗಿ ಬಿಡು ಮುಗ್ಧ ಮನಸ್ಸಿನ ಮಗು

**– ಶೋಭಾ ಮಲ್ಲಿಕಾರ್ಜುನ**
ಚಿತ್ರದುರ್ಗ

# ಒಂದು ಹೃದಯಸ್ಪರ್ಶಿ ಕಥೆ

ವೃತ್ತಿಯಿಂದ ಇಂಜಿನಿಯರ್ ಆಗಿದ್ದ ಆಕೆಯ ಪತಿಯ ಅತ್ಯಂತ ಸೌಮ್ಯ ಆದರೆ ದೃಢ ನಿಲುವನ್ನು ತುಂಬಾ ಇಷ್ಟಪಟ್ಟು ಆತನನ್ನು ಪ್ರೀತಿಸಿದಳಾಕೆ. ಆತನ ಹರವಾದ ಬಾಹುಗಳಲ್ಲಿ ತನ್ನ ತಲೆಯನ್ನು ಆನಿಸಿದಾಗ ಪ್ರಪಂಚದ ಎಲ್ಲಾ ನೆಮ್ಮದಿ ಆತನಲ್ಲಿಯೇ ಆಕೆಗೆ ದೊರೆಯುತ್ತಿತ್ತು. ವಿವಾಹಕ್ಕೂ ಮುನ್ನ ಒಂದಷ್ಟು ವರ್ಷಗಳ ಒಡನಾಟ, ನಂತರ ಮದುವೆ ಮದುವೆಯ ನಂತರ ಅದೇ ಪ್ರೀತಿ ಮುಂದುವರೆದರೂ ಇತ್ತೀಚೆಗೆ ಏಕೋ ಆಕೆಗೆ ಆತನ ವರ್ತನೆಗಳು ಭ್ರಮ ನಿರಸನವನ್ನು ಉಂಟು ಮಾಡಿದ್ದವು.

ಈ ಮುಂಚೆ ಆತ ತನ್ನಲ್ಲಿ ಉಂಟು ಮಾಡುತ್ತಿದ್ದ ನೆಮ್ಮದಿ ಇದೀಗ ಆಕೆಯ ಪಾಲಿಗೆ ಅನವಶ್ಯಕ ಎಂಬಂತೆ ಭಾಸವಾಗುತ್ತಿತ್ತು. ಭಾವುಕ ಹೆಣ್ಣುಮಗಳಾದ ಆಕೆ ತುಸು ಹೆಚ್ಚೇ ರೋಮಾಂಚಕ ಕ್ಷಣಗಳನ್ನು ಆತನೊಂದಿಗೆ ಕಳೆಯ ಬಯಸುತ್ತಿದ್ದಳು. ಚಿಕ್ಕ ಮಗು ಗೊಂಬೆಗಾಗಿ, ಐಸ್ ಕ್ರೀಮ್ ಕ್ಯಾಂಡಿಗಾಗಿ ಆಸೆ ಪಡುವಂತೆ ಆಕೆ ಆತನೊಂದಿಗಿನ ಮಧುರ ಕ್ಷಣಗಳಿಗಾಗಿ ಜಾತಕ ಪಕ್ಷಿಯಂತೆ ಕಾಯುತ್ತಿದ್ದಳು. ಇದಕ್ಕೆ ತದ್ವಿರುದ್ಧವಾಗಿ ಆಕೆಯ ಪತಿ ಸಂಪೂರ್ಣ ವಾಸ್ತವವಾದಿಯಾಗಿದ್ದುದು ಆಕೆಗೆ ಬೇಸರವನ್ನುಂಟು ಮಾಡಿತ್ತು. ಕೊನೆಗೊಂದು ದಿನ ಬೇಸತ್ತ ಆಕೆ ತನ್ನ ಪತಿಗೆ ನಾವಿನ್ನು ಜೊತೆಯಾಗಿ ಇರುವುದರಲ್ಲಿ ಯಾವುದೇ ಅರ್ಥ ಇಲ್ಲ... ನಮ್ಮಿಬ್ಬರ ಬದುಕಿನ ದಾರಿ ಕವಲೊಡೆದಿದೆ.... ನಾವಿನ್ನು ಬೇರ್ಪಡುವುದು ಸೂಕ್ತ ಎಂದು ನನಗೆ ತೋರುತ್ತಿದೆ ನೀನೇನು ಹೇಳುವೆ? ಎಂದು ಪತಿಯನ್ನು ಕೇಳಿದಳು.

ದಿಗ್ಭ್ರಮೆಗೊಂಡ ಆತ ಯಾಕೆ? ಎಂದು ಕೇಳಿದಾಗ ನಿನ್ನೊಂದಿಗೆ ಬದುಕಬೇಕೆಂಬ ಆಸೆಯನ್ನು ಪೋಷಿಸಲು ನನಗೆ ಯಾವುದೇ ಕಾರಣಗಳು ಉಳಿದಿಲ್ಲ ಎಂದು ನಿಷ್ಠುರವಾಗಿ ಹೇಳಿ ಆಕೆ ಎದ್ದು ಹೋದಳು. ಆ ಇಡೀ ರಾತ್ರಿ ಆತ ಸುಮ್ಮನೆ ಕುಳಿತು ಸಿಗರೇಟ್ ನ ಹೊಗೆಯ ಮಧ್ಯದಲ್ಲಿ ಕಾಲ ಕಳೆದನು.

ಇದನ್ನು ನೋಡಿದ ಆಕೆಯ ಕೋಪ ಮತ್ತಷ್ಟು ಹೆಚ್ಚಿತು. ತನ್ನೊಂದಿಗೆ ಕೊಂಚವೂ ಸಿಡಿಮಿಡಿ ಮಾಡದೆ ಜಗಳ ಕಾಯದೆ, ತಾನು ಹೇಳಿದ ಒಂದು ಮಾತಿಗೆ ರಾತ್ರಿ ಇಡೀ ಸಿಗರೇಟು ಸುಡುತ್ತಾ ಕುಳಿತ ಪತಿಯನ್ನು ನೋಡಿ ಇಂಥ ವ್ಯಕ್ತಿಯೊಂದಿಗೆ ಜೀವನ ಪೂರ್ತಿ ಹೇಗೆ ಇರಬೇಕು ಎಂದು ವಿಷಣ್ಣಳಾಗಿ ನಕ್ಕಳಾಕೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಅಂದು ಮುಂಜಾನೆ ಊಟದ ಮೇಜಿಗೆ ಬಂದು ಕುಳಿತ ಆತ ಅಂತಿಮವಾಗಿ ನಿನ್ನ ಮನಸ್ಸು ಬದಲಾಗಲು ನಾನು ಏನು ಮಾಡಬೇಕು? ಎಂದು ಕೇಳಿದನು. ಒಬ್ಬ ವ್ಯಕ್ತಿಯನ್ನು ಆತ ಇರುವುದಕ್ಕಿಂತ ವಿಭಿನ್ನವಾಗಿ ಬದಲಿಸುವುದು ಕಷ್ಟಸಾದ್ಯ! ಎಂದು ಯಾರೋ ಹೇಳಿದ್ದು ಅದು ನಿಜವಾಗಿಯೂ ಸರಿಯಾಗಿಯೇ ಹೇಳಿದ್ದಾರೆ ಎಂದು ಆಕೆಗೆ ತೋರಿತು.

ಆತನ ಕಣ್ಣುಗಳಲ್ಲಿ ಆಳವಾಗಿ ನೋಡುತ್ತಾ ದೀರ್ಘವಾದ ನಿಟ್ಟುಸಿರನ್ನು ಬಿಟ್ಟು ಆಕೆ "ಬೆಟ್ಟದ ತುದಿಯ ಮೇಲಿರುವ ಹೂವನ್ನು ನೀನು ನನಗಾಗಿ ತರಬಲ್ಲೆಯ?? ಕಡಿದಾದ ಬೆಟ್ಟದ ಮೇಲಿಂದ ನೀನು ಬಿದ್ದು ಸಾಯಬಹುದು ಎಂಬ ಭಯವಿದ್ದರೂ ಕೂಡ ಈ ಕೆಲಸವನ್ನು



ನೀನು ನನಗಾಗಿ ಮಾಡಲು ಸಾಧ್ಯವೇ?" ಎಂದು ಪ್ರಶ್ನಿಸಿದಳು.

ಕೆಲ ಕ್ಷಣಗಳ ಮೌನದ ನಂತರ ನಿನ್ನ ಈ ಪ್ರಶ್ನೆಗೆ ನಾಳೆ ಮುಂಜಾನೆ ನಾನು ಉತ್ತರ ಹೇಳುತ್ತೇನೆ ಎಂದು ಆತ ಹೇಳಿದ... ಆತನ ಉತ್ತರದಿಂದ ಆಕೆಯಲ್ಲಿ ಉಳಿದ ಅಲ್ಪಸ್ವಲ್ಪ ಭರವಸೆಯು ಕೂಡ ಮುಳುಗಿ ಹೋಯಿತು.

ಮರುದಿನ ಮುಂಜಾನೆ ಆತನನ್ನು ಹುಡುಕಿಕೊಂಡು ಆತನ ಕೋಣೆಗೆ ಹೋದ ಆಕೆಗೆ ಗಾಜಿನ ಪೇಪರ್ ವೇಟ್ ಕೆಳಗೆ ಒಂದು ಪುಟ್ಟ ಕಾಗದದ ಮೇಲೆ ಆತನ ಕೈಬರಹದ ಒಂದು ಪತ್ರ ಕಂಡು ಬಂತು. ಕುತೂಹಲದಿಂದ ಅದರ ಮೇಲೆ ಕಣ್ಣಾಡಿಸಿದ ಆಕೆಗೆ ನನ್ನ ಒಲವೇ ನಾನು ನಿನಗಾಗಿ ಕಡಿದಾದ ಬೆಟ್ಟದ ಮೇಲಿರುವ ಹೂವನ್ನು ಖಂಡಿತವಾಗಿಯೂ ಹರಿದು ತರಲಾರೆ.... ಕ್ಷಮಿಸು.

ಮೊದಲ ಸಾಲನ್ನು ಓದಿಯೇ ಆಕೆಯ ಹೃದಯದಲ್ಲಿ ಕೋಲಾಹಲ ಉಂಟಾಯಿತು. ಆದರೂ ತುಸು ಸಂಭಾಳಿಸಿಕೊಂಡು ಮತ್ತೆ ಮುಂದುವರೆದು ಕಾಗದವನ್ನು ಓದತೊಡಗಿದಳು. ಅದರಲ್ಲಿ ಸ್ವಲ್ಪ ಸಮಾಧಾನದಿಂದ ನಾನು ಈ ತೀರ್ಮಾನವನ್ನು ಮಾಡಲು ಕಾರಣವೇನು ಎಂಬುದನ್ನು ಕೇಳು ನೀನು ಯಾವಾಗಲೂ ಬಳಸುವ ಕಂಪ್ಯೂಟರ್‌ನಲ್ಲಿ ಸಾಫ್ಟ್‌ವೇರ್ ಪ್ರೋಗ್ರಾಮ್ ಗಳನ್ನು ಚೆಲ್ಲಾಪಿಲ್ಲಿ ಆಗಿಸಿ ಬಿಡುವೆ ಮತ್ತು ಏನು ಮಾಡಬೇಕು ಎಂದು ತೋಚದೆ ಅಳತೊಡಗುವೆ... ಆಗ ನಿನ್ನ ಎಲ್ಲಾ ಸಾಫ್ಟ್‌ವೇರ್ ಪ್ರೋಗ್ರಾಮ್ ಗಳನ್ನು ಮತ್ತೆ ಸರಿಪಡಿಸಲು ಅವುಗಳನ್ನು ಮರುಸ್ಥಾಪಿಸಿ ನಿನಗೆ ಅನುಕೂಲ ಮಾಡಿಕೊಡಲು ನನ್ನ ಕೈಗಳ ಅವಶ್ಯಕತೆ ನನಗಿದೆ.

ನೀನು ಎಲ್ಲಾದರೂ ಹೋಗುವಾಗ ಮನೆಯ ಕೀಲಿಯನ್ನು ಮರೆತು ಹೋಗುವೆ.... ಆಗ ನಾನು ಎಲ್ಲಿದ್ದರೂ ಕೂಡ ಮನೆಗೆ ಬಂದು ನಿನಗಾಗಿ ಬಾಗಿಲನ್ನು ತೆಗೆಯಲು ಮತ್ತೊಂದು ಕೀಯನ್ನು ನೀಡಲು ನನ್ನ ಕಾಲುಗಳನ್ನು ನಾನು ರಕ್ಷಿಸಿಕೊಳ್ಳಲೇಬೇಕು. ಅದು ಅಲ್ಲದೆ ಪ್ರವಾಸ ಪ್ರಿಯಳಾದ ನೀನು ಯಾವಾಗಲೂ ಹೊಸ ಸ್ಥಳಗಳಲ್ಲಿ ರಸ್ತೆಗಳನ್ನು ಮರೆತು ಗಾಬರಿಯಿಂದ ನಿಂತು ಬಿಟ್ಟಾಗ ನಿನಗೆ ದಾರಿ ತೋರಿಸಲು ನನಗೆ ನನ್ನ ಕಣ್ಣುಗಳ ಅವಶ್ಯಕತೆ ಇದೆ.

ಪ್ರತಿ ತಿಂಗಳು ನಿನ್ನ ಆ ದಿನಗಳಲ್ಲಿ ನಿನಗೆ ಬರುವ ಹೊಟ್ಟೆ ನೋವನ್ನು ಶಮನಗೊಳಿಸಲು ನನ್ನ ಅಂಗೈಯಿಂದ ಮೆದುವಾಗಿ ಒತ್ತಲು ನನ್ನ ಅಂಗೈಗಳ ಅವಶ್ಯಕತೆ ನನಗಿದೆ. ಜೊತೆಗೆ ಆ ಸಮಯದಲ್ಲಿ ಮನೆಯಲ್ಲಿ ಇರಲು ಇಷ್ಟಪಡುವ ನಿನ್ನ ಒಂಟಿತನದ ಬೇಸರವನ್ನು ಹೋಗಲಾಡಿಸಲು ನಿನಗೆ ಕಥೆ ಹೇಳುವ ತಮಾಷೆ ಮಾಡಲು ನನಗೆ ನನ್ನ ಬಾಯಿಯ ಅವಶ್ಯಕತೆ ಇದೆ.... ಆದ್ದರಿಂದ ಈ ಸಾಹಸಕ್ಕೆ ನಾನು ಎಳಸಲಾರೆ.

ನಿನ್ನ ಕಣ್ಣುಗಳ ಆರೋಗ್ಯಕ್ಕೆ ಎಳ್ಳಷ್ಟು ಒಳ್ಳೆಯದಲ್ಲ ಎಂಬುದು ಗೊತ್ತಿದ್ದು ಕೂಡ ನೀನು ಯಾವಾಗಲೂ ಕಂಪ್ಯೂಟರ್ ಮುಂದೆ ಸ್ಥಾಪಿತಳಾಗಿರುವೆ... ಮುಂದೆ ವಯಸ್ಸಾದ ಕಾಲದಲ್ಲಿ ನಿನ್ನ ಕಣ್ಣು ಮುಂಜಾದಾಗ ನಿನಗೆ ಸಹಾಯ ಮಾಡಲು ನನ್ನ ಕಣ್ಣುಗಳನ್ನು ನಾನು ಸುರಕ್ಷಿತವಾಗಿ ಕಾಯ್ದುಕೊಳ್ಳಲೇಬೇಕು. ನೀನು ಇಚ್ಛಿಸಿದಲ್ಲಿ ನಿನ್ನನ್ನು ಕರೆದೊಯ್ದು ಪ್ರಕೃತಿಯ ಸೌಂದರ್ಯವನ್ನು ನಿನಗೆ ವರ್ಣಿಸಲು ನನಗೆ ನನ್ನ ಕಣ್ಣುಗಳು ಬೇಕೇ ಬೇಕು.

ನೀನು ನಿನ್ನನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ ನಾನು ನಿನ್ನನ್ನು ಪ್ರೀತಿಸುವೆ.... ಆದ್ದರಿಂದ ನಿನಗಾಗಿ ನಾನು ನನ್ನನ್ನು ಸದೃಢವಾಗಿ ಇಟ್ಟುಕೊಳ್ಳಲು ಬಯಸುವೆ... ಹೂವಿಗಾಗಿ ಕಡಿದಾದ ಬೆಟ್ಟವನ್ನು ಹತ್ತಿ ಸಾಯಲು ನಾನೊಲ್ಲೆ ಎಂಬ ಪದಗಳನ್ನು ಓದುವಾಗ ಆಕೆಯ ಕಣ್ಣಿಂದ ಸುರಿದ ನೀರು ಪತ್ರದ ಮೇಲೆ ಹನಿ ಹನಿಯಾಗಿ ಬೀಳುತ್ತಿತ್ತು. ಕಣ್ಣೀರನ್ನು ಒರೆಸಿಕೊಂಡು ಆಕೆ ಪತ್ರ ಓದುವುದನ್ನು ಮತ್ತೆ ಮುಂದುವರೆಸಿದಳು

ಇದೀಗ ನೀನು ನನ್ನ ಉತ್ತರವನ್ನು ಓದಿರುವೆಯಾದರೆ, ನನ್ನ ಉತ್ತರದಿಂದ ನಿನಗೆ ಸಂತೃಪ್ತಿ ಎನಿಸಿದರೆ ಮನೆಯ ತಲೆ ಬಾಗಿಲನ್ನು ತೆಗೆ, ನಿನಗಾಗಿ ನಿನ್ನಿಷ್ಟದ ಹಣ್ಣು ತರಕಾರಿಯನ್ನು ತಂದು ಕಾಯುತ್ತ ನಿಂತಿರುವೆ.

ಪತ್ರವನ್ನು ಅಲ್ಲಿಯೇ ಇಟ್ಟು ಕಣ್ಣೀರನ್ನು ಒರೆಸಿಕೊಂಡ ಆಕೆ ತುಸು ಓಡುವ ನಡಿಗೆಯಲ್ಲಿಯೇ ಹೋಗಿ ತಲೆ ಬಾಗಿಲನ್ನು ತೆಗೆದು ನೋಡಿದರೆ ತನ್ನ ಎರಡೂ ಕೈಗಳನ್ನು ಒಂದರೊಳಗೊಂದು ಸೇರಿಸಿ ತುಸು ಆತಂಕಭರಿತ ಕಂಗಳಿಂದ ಕಾಯುತ್ತಾನೆ ನಿಂತ ಪತಿಯನ್ನು ಕಂಡ ಆಕೆ ಆತನನ್ನು ಗಟ್ಟಿಯಾಗಿ ತಬ್ಬಿಕೊಂಡು... ನೀನು ನನ್ನನ್ನು ಪ್ರೀತಿಸುವಷ್ಟು ಮತ್ತಾರೂ ನನ್ನನ್ನು ಪ್ರೀತಿಸಲಾರರು ಎಂದು ಇದೀಗ ನನಗೆ ಅರಿವಾಯಿತು. ಆದ್ದರಿಂದ ನಾನು ಬೆಟ್ಟದ ಮೇಲಿರುವ ಹೂಗಳನ್ನು ಅಲ್ಲಿಯೇ ಬಿಟ್ಟುಬಿಡಲು ತೀರ್ಮಾನಿಸಿರುವೆ ಎಂದು ಹೇಳಿದಾಗ ಆತನು ಕೂಡ ಆಕೆಯನ್ನು ಮೃದುವಾಗಿ ತಬ್ಬಿಕೊಂಡು ಆಕೆಯ ಹಣೆಗೆ ಮುತ್ತಿಟ್ಟನು.

ಇದುವೇ ಜೀವನ ಮತ್ತು ಇದುವೇ ಪ್ರೀತಿ... ನಮ್ಮನ್ನು ಪ್ರೀತಿಸುವವರು ನಮ್ಮ ಸುತ್ತ ಇದ್ದಾಗ ಉತ್ಸಾಹವೇ ನಮ್ಮನ್ನು ಆವರಿಸಿರುತ್ತದೆ. ಉತ್ಸಾಹ ಉಲ್ಲಾಸಗಳು ನಮ್ಮ ಬದುಕಿನ ಬಹುಪಾಲನ್ನು ಆವರಿಸಿರಬಹುದು, ಆದರೆ ಕೇವಲ ಉಲ್ಲಾಸ ಉತ್ಸಾಹಗಳು ಸಂತೋಷಗಳು ಮಾತ್ರ ಜೀವನವಲ್ಲ. ಪ್ರತಿಯೊಬ್ಬರ ಜೀವನವು ವಿಭಿನ್ನ ವಿಶೇಷ ಮತ್ತು ವಿಶಿಷ್ಟ ಎಲ್ಲರೂ ಅವರವರ ಜೀವನದ ನಾಯಕ ಮತ್ತು ನಾಯಕಿಯರೇ. ಬೇರೆಯವರ ಜೀವನದೊಂದಿಗೆ ನಮ್ಮ ಜೀವನವನ್ನು ಹೋಲಿಕೆ ಮಾಡಿ ವ್ಯಥೆಪಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ.

ಪ್ರೀತಿಯನ್ನು ವ್ಯಕ್ತಪಡಿಸಲು ವಿಶೇಷ ಸಮಯದಲ್ಲಿ ಹೂವುಗಳನ್ನು ನೀಡುತ್ತಾರೆ ಎಂಬುದು ನಿಜ ಆದರೆ ಆ ತೋರಿಕೆಯ ಪ್ರೀತಿಯ ಹಿಂದೆ ನಿಜವಾದ ಪ್ರೀತಿ ತನ್ನ ಅಸ್ತಿತ್ವವನ್ನು ಹೊಂದಿರಬೇಕು... ಅದು ಜೀವನ ಮತ್ತು ಅದುವೇ ಜೀವನ ಮಾತ್ರ.

ಪತಿ ಪತ್ನಿಗೆ ಪತ್ನಿ ಪತಿಗೆ ಪರಸ್ಪರ ಐ ಲವ್ ಯು ಹೇಳದೇ ಇದ್ದರೂ ಕೂಡ ಒಬ್ಬರಿನ್ನೊಬ್ಬರ ಕಾಳಜಿ ಮಾಡುವುದು ಪ್ರೀತಿಯ ಮತ್ತೊಂದು ರೂಪ. ಹೇಳದೆ ಮಾಡುವುದು ರೂಡಿಯೊಳಗುತ್ತಮ ಎಂಬ ಮಾತಿನಂತೆ ನಮ್ಮ ಭಾರತೀಯ ಸಂಪ್ರದಾಯದ ದಂಪತಿಗಳು ಜೀವಿಸುತ್ತಿದ್ದಾರೆ.. ಸನಾತನವಾದರೂ ಚಿರನೂತನವಾಗಿರುವ ನಮ್ಮ ಭಾರತೀಯ ವೈವಾಹಿಕ ಪದ್ಧತಿ ಎಂದೆಂದಿಗೂ ಅಜರಾಮರವಾಗಿರಲಿ. ಏನಂತೀರಾ ಸ್ನೇಹಿತರೇ?


For Ads
Contact:
94486 33038

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

**08–04–2025 – ಮಂಗಳವಾರ**

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಆಶ್ಲೇಷ |
| ಯೋಗ | : ಶೂಲ |
| ಕರಣ | : ವಾಣಿಜ |
| ಸೂರ್ಯೋದಯ | : 06:13:50 |
| ಸೂರ್ಯಾಸ್ತ | : 18:43:53 |
| ರಾಹು ಕಾಲ | : 15:36–17:10 |
| ಯಮಘಂಡ ಕಾಲ | : 09:21–10:55 |
| ಗುಳಿಕ ಕಾಲ | : 12:29–14:03 |



## ತುಂಗಭದ್ರಾ ನೀರಿನ ಮಟ್ಟ

ಸೋಮವಾರ : 07–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.86 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 4279 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.234 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1579.44 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 932 ಕ್ಯುಸೆಕ್ |
| ಸಾಮರ್ಥ್ಯ | 4.205 ಟಿಎಂಸಿ |

### ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆ । ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಸೂಚನೆ

# ಗ್ರಾಮೀಣ ಶುದ್ಧಕುಡಿಯುವ ನೀರಿನ ಘಟಕಗಳಲ್ಲಿ ಸ್ವಚ್ಛ ಶುದ್ಧತೆ ಕಾಯ್ದುಕೊಳ್ಳಿ



■ **ಹಂಪಿ ಟೈಮ್ಸ್ ಬಳ್ಳಾರಿ**

ಬೇಸಿಗೆ ಹಿನ್ನೆಲೆಯಲ್ಲಿ ವಿವಿಧ ತಾಲ್ಲೂಕು ಹಾಗೂ ಗ್ರಾಮಗಳಲ್ಲಿ ಕುಡಿಯುವ ನೀರಿನ ಪೂರೈಕೆ ಸಮರ್ಪಕವಾಗಿರಬೇಕು ಹಾಗೂ ನಿರ್ವಹಣೆಯಲ್ಲಿ ಯಾವುದೇ ಲೋಪವಾಗುವಂತಿಲ್ಲ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸೋಮವಾರದಂದು, ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ಏರ್ಪಡಿಸಿದ್ದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಬೇಸಿಗೆಯಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಕೊರತೆಯಾಗದಂತೆ ನೋಡಿಕೊಳ್ಳಬೇಕು. ನಗರ ಮತ್ತು ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರು ಸಮಸ್ಯೆಯಾದಲ್ಲಿ ನೀರಿನ ಟ್ಯಾಂಕರ್ ಇರಿಸಿಕೊಳ್ಳಬೇಕು. ಅಗತ್ಯ ಮೇವಿನ ದಾಸ್ತಾನು ಇಟ್ಟುಕೊಳ್ಳಬೇಕು ಎಂದು ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಬರಬಹುದಾದಂತಹ ಗ್ರಾಮಗಳನ್ನು ಗುರುತಿಸಿ, ಆ ಗ್ರಾಮಗಳಿಗೆ ಆಯಾ ತಾಲ್ಲೂಕು ತಹಶೀಲ್ದಾರರು, ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿಗಳು, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಗರಸಭೆ, ಪುರ ಸಭೆ ಹಾಗೂ ಪಪಂ ಮುಖ್ಯಾಧಿಕಾರಿಗಳು ಭೇಟಿ ನಡೆಸಬೇಕು ಎಂದು ನಿರ್ದೇಶನ ನೀಡಿದರು.

ಗ್ರಾಮೀಣ ಭಾಗಗಳಲ್ಲಿ ಆರ್‌ಓ ಘಟಕಗಳನ್ನು ಶುದ್ಧಗೊಳಿಸಿಟ್ಟುಕೊಳ್ಳಬೇಕು. ಕುಡಿಯುವ ನೀರು ಎಲ್ಲೂ ಕಲುಷಿತಗೊಳ್ಳದಂತೆ ಎಚ್ಚರವಹಿಸಬೇಕು. ಮುಖ್ಯವಾಗಿ ಬಳ್ಳಾರಿ ತಾಲ್ಲೂಕಿನ ಹಲಕುಂದಿ, ಹೊನ್ನಳ್ಳಿ, ಹೊನ್ನಳ್ಳಿ ತಾಂಡಾ ಗ್ರಾಮಗಳಲ್ಲಿ ಉಲ್ಬಣವಾಗಬಹುದಾದ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ತಾಲ್ಲೂಕು ತಹಶೀಲ್ದಾರರಿಗೆ ಸೂಚಿಸಿದರು.

**ಅಧಿಕಾರಿಗಳೊಂದಿಗೆ ಸಮನ್ವಯತೆ ಇರಲಿ:**

ಕುಡಿಯುವ ನೀರು ಪೂರೈಕೆ ಸಂಬಂಧಿಸಿದಂತೆ ವಿದ್ಯುತ್ ಸಮಸ್ಯೆ ಕಂಡುಬಂದಲ್ಲಿ ಕೂಡಲೇ ಜೆಸ್ಕಾಂ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯತೆ ಸಾಧಿಸಬೇಕು. ನಿಗದಿತ ಅವಧಿಯೊಳಗೆ ಸಮಸ್ಯೆ ಪರಿಹರಿಸಲು ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಅವರು ತಿಳಿಸಿದರು.

ಬಿಸಿಲಿನ ಪ್ರಖರತೆ ಹೆಚ್ಚಾಗಿರುವ ಹಿನ್ನಲೆಯಲ್ಲಿ ಸರ್ಕಾರಿ ಕಚೇರಿಗಳ ಸಮಯವು ಬದಲಾಗಿರುವುದರಿಂದ ಅವಶ್ಯಕತೆ ಬಂದಾಗ ಸಮಯ ಮೀರಿಯೂ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸಬೇಕು. ಉದಾಸೀನತೆ ತೋರುವಂತಿಲ್ಲ ಎಂದು ಎಚ್ಚರಿಸಿದರು.

ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್ ಅವರು ಮಾತನಾಡಿ, ಆಯಾ ಗ್ರಾಪಂ ಮಟ್ಟದಲ್ಲಿನ ಕುಡಿಯುವ ನೀರಿನ ಓವರ್ ಹೆಡ್ ಟ್ಯಾಂಕ್ ಗಳ ಭರ್ತಿಗೆ ಕ್ರಮವಹಿಸಬೇಕು. ಸ್ವಚ್ಛತೆಗೆ ಆದ್ಯತೆ ನೀಡಬೇಕು. ಈ ಕುರಿತು ಅಧಿಕಾರಿಗಳು ವ್ಯಾಟ್ಸ್ ಆಪ್ ಗುಂಪು ರಚಿಸಿ ಎಲ್ಲರು ಜಂಟಿಯಾಗಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಸಹಾಯಕ ಆಯುಕ್ತ ಪ್ರಮೋದ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರರಾದ ಇಂದುಧರ್, ಬಳ್ಳಾರಿ ಗ್ರಾಮೀಣ ಜೆಸ್ಕಾಂನ ಕಾರ್ಯನಿರ್ವಾಹಕ ಅಭಿಯಂತರರಾದ ರಂಗನಾಥಬಾಬು ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಸರ್ಕಾರದ ಸರ್ವೋತ್ತಮ ಸೇವಾ ಪ್ರಶಸ್ತಿಗೆ ನಾಮ ನಿರ್ದೇಶನಕ್ಕೆ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

2024 ಮತ್ತು 2025ನೇ ಸಾಲಿನ ರಾಜ್ಯ ಸರ್ಕಾರದ ಸರ್ವೋತ್ತಮ ಸೇವಾ ಪ್ರಶಸ್ತಿಗೆ ನಾಮ ನಿರ್ದೇಶನಗಳಿಗೆ ಆಹ್ವಾನಿಸಲಾಗಿದೆ.

ರಾಜ್ಯ ಸರ್ಕಾರದ ಅಧಿಕಾರಿ, ನೌಕರರಿಗೆ “ಸರ್ವೋತ್ತಮ ಸೇವಾ ಪ್ರಶಸ್ತಿ” ನೀಡುವ ಯೋಜನೆಯನ್ನು 2012 ರಿಂದ ಜಾರಿಗೆ ತರಲಾಗಿದೆ. ಪ್ರಸ್ತುತ 2024 ಮತ್ತು 2025ನೇ ಸಾಲಿನಲ್ಲಿ ರಾಜ್ಯ ಮಟ್ಟ ಹಾಗೂ ಜಿಲ್ಲಾ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿಯನ್ನು ಪಡೆಯಲು ರಾಜ್ಯ ಸರ್ಕಾರದ ಅಧಿಕಾರಿ, ನೌಕರರು ತಮ್ಮ ನಾಮ ನಿರ್ದೇಶನಗಳನ್ನು ಆನ್‌ಲೈನ್ ಮೂಲಕ ಮಾತ್ರ ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ.

“ಸರ್ವೋತ್ತಮ ಸೇವಾ ಪ್ರಶಸ್ತಿಯ” ರಾಜ್ಯ ಮಟ್ಟ ಹಾಗೂ ಜಿಲ್ಲಾ ಮಟ್ಟದ ಪ್ರಶಸ್ತಿಗಳಿಗೆ ಅರ್ಜಿ ಸಲ್ಲಿಸಬಯಸುವವರು ಪ್ರತಿ ಹಂತಕ್ಕೂ ಪ್ರತ್ಯೇಕವಾಗಿ ತಮ್ಮ ನಾಮ ನಿರ್ದೇಶನವನ್ನು ವೆಬ್‌ಸೈಟ್ https://dparar.karnataka.gov.in/ ಅಥವಾ https://sarvothamaawards.karnataka.gov.in/ ರ ಮೂಲಕ ಏಪ್ರಿಲ್ 28 ರೊಳಗಾಗಿ ಸಲ್ಲಿಸಬೇಕೆಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ತಿಳಿಸಿದ್ದಾರೆ.




## ಆಸೆ-ಆಮೀಷಗಳಿಗೆ ಒಳಗಾಗದಿರಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಬೋವಿ ಅಭಿವೃದ್ಧಿ ನಿಗಮ ವತಿಯಿಂದ ಭೂ ಒಡೆತನ ಯೋಜನೆಯಡಿ ಅರ್ಜಿ ಸಲ್ಲಿಸಿರುವ ಬಳ್ಳಾರಿ, ಸಿರುಗುಪ್ಪ ಮತ್ತು ಇತರೆ ತಾಲ್ಲೂಕುಗಳ ಅರ್ಜಿದಾರರು ಹಾಗೂ ಅರ್ಜಿಯ ಭೂ ಮಾಲೀಕರು ದಲ್ಲಾಳಿಗಳ ಆಸೆ ಆಮೀಷಗಳಿಗೆ ಒಳಗಾಗಬಾರದು ಎಂದು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗಾಗಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಚೇರಿಗೆ ಸಂಪರ್ಕಿಸಬಹುದು.

For Events Ads
& News Coverage
Contact: M: 94486 33038
www.hampitimes.com /epaper.hampitimes.com


OUR OFFERINGS:
Sales & Distribution – Genuine Toshiba photocopiers and GALTECH Smart panels
Service & Maintenance – Expert technical support and AMC services
Consumables & Accessories – Genuine spare parts
TOSHIBA GALTECH
M:9686663132
SAI MANI ENTERPRISES
Authorized Dealer of Toshiba Photocopiers & GALTECH Sirius interactive flat panel display for Vijayanagara, Bellary and Koppal Districts
# 545/A 6th Ward, Hampi Road, HOSAPETE-583201, Vijayanagara Dist.

## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ




## ಏ.9 ಬಸವ ಜಯಂತಿ ಪೂರ್ವಭಾವಿ ಸಭೆ.

**ಹಂಪಿ ಟೈಮ್ಸ್ ಹೊಸಪೇಟೆ**

ಇದೇ ತಿಂಗಳು ಏ.30 ರಂದು ಜರುಗಲಿರುವ ಶ್ರೀಬಸವೇಶ್ವರರ ಜಯಂತಿ ಹಿನ್ನಲೆಯಲ್ಲಿ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏ.9 ರಂದು ಬೆ.11:30 ಕ್ಕೆ ಪೂರ್ವಭಾವಿ ಸಿದ್ದತಾ ಸಭೆಯನ್ನು ನಿಗಧಿಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಏ.9 ರಂದು ನಗರಸಭೆ ಸಾಮಾನ್ಯ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ನಗರಸಭೆಯ ಸಾಮಾನ್ಯ ಸಭೆ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಏ.9 ರಂದು ಬೆಳಗ್ಗೆ 11 ರಿಂದ ನಗರಸಭೆ ಸಭಾಂಗಣದಲ್ಲಿ ನಡೆಯಲಿದೆ ಎಂದು ಪೌರಾಯುಕ್ತರು ತಿಳಿಸಿದ್ದಾರೆ.

## ಏ.11 ರಂದು ವಾಕ್ ಇನ್ ಇಂಟರ್‌ವ್ಯೂ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ತಾಲ್ಲೂಕಿನ ಕೊಳಗಲ್ಲಿನ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ 2025–26ನೇ ಸಾಲಿಗೆ ವಿವಿಧ ಹುದ್ದೆಗಳ ಭರ್ತಿಗೆ ಏ.11 ರಂದು ವಾಕ್ ಇನ್ ಇಂಟರ್‌ವ್ಯೂ ಗೆ ಅರ್ಹ ಮತ್ತು ಅನುಭವವುಳ್ಳ ಅಭ್ಯರ್ಥಿಗಳಿಂದ ಆಹ್ವಾನಿಸಲಾಗಿದೆ.

ಅರ್ಹ 21 ರಿಂದ 60 ವರ್ಷ ವಯೋಮಿತಿ ಗೊಳಪಟ್ಟ, ನವೋದಯ ಅಥವಾ ಕೇಂದ್ರಿಯ ವಿದ್ಯಾಲಯ ಶಾಲೆಗಳಲ್ಲಿ ಉಪನ್ಯಾಸ ಮಾಡಿದ ಅನುಭವವುಳ್ಳ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲು ವಾಕ್ ಇನ್ ಇಂಟರ್‌ವ್ಯೂ ಅಂದು ಬೆಳಿಗ್ಗೆ 09 ಗಂಟೆಗೆ ಕೊಳಗಲ್ಲಿನ ಏಕಲವ್ಯ ಮಾದರಿ ವಸತಿ ಶಾಲೆಯಲ್ಲಿ ಏರ್ಪಡಿಸಲಾಗಿದೆ. ಹುದ್ದೆಗಳು ತಾತ್ಕಾಲಿಕ ಆಗಿರುತ್ತವೆ. ಸಂದರ್ಶನಕ್ಕೆ ಆಸಕ್ತ ಅಭ್ಯರ್ಥಿಗಳು ತಮ್ಮ ಮೂಲ ಶೈಕ್ಷಣಿಕ ದಾಖಲಾತಿಗಳೊಂದಿಗೆ ಹಾಜರಾಗಬೇಕು. ಸಂದರ್ಶನ ಸಮಯದಲ್ಲಿ ಹಾಜರಾದ ಅಭ್ಯರ್ಥಿಗಳಿಗೆ ಯಾವುದೇ ಭತ್ಯೆ ನೀಡಲಾಗುವುದಿಲ್ಲ.

ಹುದ್ದೆಗಳು: ಕನ್ನಡ ಶಿಕ್ಷಕ: ಹುದ್ದೆ 01, ಜೀವಶಾಸ್ತ್ರ ಶಿಕ್ಷಕ: ಹುದ್ದೆ 01, ಇಂಗ್ಲೀಷ್ ಭಾಷೆಯಲ್ಲಿ ತರಬೇತಿ ಪಡೆದ ಶಿಕ್ಷಕ–01, ಕನ್ನಡದಲ್ಲಿ ತರಬೇತಿ ಪಡೆದ ಪದವೀಧರ ಶಿಕ್ಷಕರು–02, ದೈಹಿಕ ಶಿಕ್ಷಕರು(ಪುರುಷ ಮತ್ತು ಮಹಿಳೆ)–01+01 ಮತ್ತು ಹಾಸ್ಟೆಲ್ ವಾರ್ಡನ್–01.

ವಿದ್ಯಾರ್ಹತೆ ಮತ್ತು ಹೆಚ್ಚಿನ ಮಾಹಿತಿಗಾಗಿ ದೂ.08392–242453 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

# 2 ಸಾವಿರ ಹೊಸ ಬಸ್ಸು ಖರೀದಿ

## ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿಕೆ | ಸರ್ಕಿಟ್ ಹೌಸ್ ಕಟ್ಟಡ ಶಂಕುಸ್ಥಾಪನೆ



**ಹಂಪಿ ಟೈಮ್ಸ್ ಕೊಪ್ಪಳ**

ಜನರ ಅನುಕೂಲಕ್ಕಾಗಿ ರಾಜ್ಯದಲ್ಲಿ ಎರಡು ಸಾವಿರ ಬಸ್ಸುಗಳನ್ನು ಖರೀದಿಸಲಾಗುತ್ತಿದ್ದು, ಅದರಲ್ಲಿ ಕಲ್ಯಾಣ ಕರ್ನಾಟಕ ಭಾಗಕ್ಕೆ 600 ರಿಂದ 700 ಬಸ್ಸುಗಳನ್ನು ಕೊಡುತ್ತೇವೆ ಎಂದು ಸಾರಿಗೆ ಮತ್ತು ಮುಜರಾಯಿ ಹಾಗೂ ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗಾರೆಡ್ಡಿ ಹೇಳಿದರು.

ಅವರು ಸೋಮವಾರ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಬೇವೂರಿನಲ್ಲಿ ನೂತನ ಬಸ್ ನಿಲ್ದಾಣದ ಶಂಕುಸ್ಥಾಪನೆ ಹಾಗೂ ಲೋಕೋಪಯೋಗಿ ಇಲಾಖೆಯ ಸರ್ಕಿಟ್ ಹೌಸ್ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ಹಬ್ಬ–ಹರಿ ದಿನಗಳ ಸಂದರ್ಭ ಹಾಗೂ ಶಾಲಾ–ಕಾಲೇಜುಗಳ ಮಕ್ಕಳಿಗೆ ಹೊಸದಾಗಿ ಬಸ್ ಖರೀದಿಸುವದರಿಂದ ಅವರು ದಿನಾಲು ಸಂಚಾರ ಮಾಡಲು ಅನುಕೂಲವಾಗುವದರ ಜೊತೆಗೆ ಬಸ್ಸುಗಳ ಕೊರತೆ ನೀಗಿಸಿದಂತಾಗುತ್ತದೆ. ಯಲಬುರ್ಗಾ ಕ್ಷೇತ್ರದಲ್ಲಿ 16 ಬಸ್ಸ ನಿಲ್ದಾಣಗಳನ್ನು ಕಟ್ಟುತ್ತಿದ್ದೇವೆ. ಇಂದು ಬೇವೂರು ಹಾಗೂ ಹಿರೇವಂಕಲಕುಂಟಾ ನೂತನ ಬಸ್ ನಿಲ್ದಾಣಗಳ ಶಂಕುಸ್ಥಾಪನೆ ನೆರವೇರಿಸುತ್ತಿದ್ದೇನೆ. ಮಂಗಳೂರಿಗೆ ಬಸ್ ನಿಲ್ದಾಣ ಮಾಡಲು ಇಂದೇ ಆದೇಶ ನೀಡಿದ್ದೇನೆ ಎಂದರು.

ಕೊಪ್ಪಳ–ಬೆಂಗಳೂರು ಹಾಗೂ ಕೊಪ್ಪಳ–ಬೀದರ ಜಿಲ್ಲೆಗಳಿಗೆ ಬರುವ ಕೆಲವೇ ದಿನಗಳಲ್ಲಿ ನಾನ ಎಸಿ ಸ್ಲೀಪರ್ ಬಸ್ಸುಗಳನ್ನು ಬಿಡಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಈ ಹಿಂದೆ ಪ್ರಜಾವಾಣಿ ಪತ್ರಿಕೆಯಲ್ಲಿ ಬಂದ ಒಂದು ಸುದ್ದಿಯನ್ನು ಓದಿ 15 ರಿಂದ 20 ದಿನಗಳು ಬಿಟ್ಟು ಹುಲಿಗೆಮ್ಮ ದೇವಸ್ಥಾನಕ್ಕೆ ಒಂದು ವರ್ಷದ ಹಿಂದೆ ಭೇಟಿ ನೀಡಿ, ಹುಲಿಗೆಮ್ಮ ದೇವಸ್ಥಾನ ಪ್ರಾಧಿಕಾರ ಮಾಡಲು ತೀರ್ಮಾನ ಮಾಡಿದೆ. 4 ರಿಂದ 5 ತಿಂಗಳ ಹಿಂದೆ ಪ್ರಾಧಿಕಾರ ಮಾಡಲು ಸಂಪುಟ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ. ಹುಣ್ಣುಮೆ ಸಂದರ್ಭದಲ್ಲಿ ಅಲ್ಲಿಗೆ ಒಂದು ಲಕ್ಷಕಿಂತ ಹೆಚ್ಚು ಜನರು ಭೇಟಿ ನೀಡುತ್ತಾರೆ. ಸೂಕ್ತ ವ್ಯವಸ್ಥೆ ಇಲ್ಲದ ಕಾರಣ ಜನರು ಎಲ್ಲೆಂದರಲ್ಲಿ ಮಲಗುತ್ತಾರೆ. ಹಾಗಾಗಿ ಪ್ರಾಧಿಕಾರದಿಂದ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಉಳಿದುಕೊಳ್ಳಲು ಅನುಕೂಲಕರ ವ್ಯವಸ್ಥೆಗಳನ್ನು ಮಾಡಲಾಗುವುದು ಎಂದು ಹೇಳಿದರು.

ಅಂಜನಾದ್ರಿಗೆ ಹಿಂದಿನ ಸರ್ಕಾರ 19 ಕೋಟಿ ಅನುದಾನ ನೀಡಿತ್ತು ನಮ್ಮ ಸರ್ಕಾರ ಬಂದಮೇಲೆ 100 ಕೋಟಿ ಅನುದಾನ ನೀಡಲಾಗಿದೆ. ಪ್ರವಾಸಿ ಮಂದಿರ, ಶಾಫಿಂಗ್ ಕಾಂಪ್ಲೆಕ್ಸ್, ಪ್ರದಕ್ಷಿಣಾ ಪಥ, ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸುವ ಮೂಲಕ ಆಂಜನೇಯ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಸೂಕ್ತ ವ್ಯವಸ್ಥೆಗಳನ್ನು ಕಲ್ಪಿಸಲಾಗುತ್ತಿದೆ ಎಂದು ಹೇಳಿದರು.

ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರೆಡ್ಡಿ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ಮಹಿಳೆಯರು ತಮ್ಮ ಮಕ್ಕಳನ್ನು ಕರೆದುಕೊಂಡು ಬಿಸಿಲಿನಲ್ಲಿ ನಿಲ್ಲುತ್ತಿದ್ದರು ಅವರ ಕಷ್ಟ ನೋಡಿ ಎಲ್ಲಾ ಕಡೆ ಬಸ್ ನಿಲ್ದಾಣಗಳನ್ನು ಮಾಡುತ್ತಿದ್ದೇನೆ. ಇಂದು ಬೇವೂರ ಹಾಗೂ ಹಿರೇವಂಕಲಕುಂಟಾ ಬಸ್ ನಿಲ್ದಾಣಗಳ ಶಂಕುಸ್ಥಾಪನೆ ನೆರವೇರಿಸಲಾಗುತ್ತಿದೆ. 6 ಕೋಟಿ ರೂ ವೆಚ್ಚದಲ್ಲಿ ಮಂಗಳೂರು ಹೊಸ ಬಸ್ ನಿಲ್ದಾಣ ಮಾಡಲಾಗುವುದು. ಇದಕ್ಕೆ ಸಾರಿಗೆ ಸಚಿವರು ಇಂದೇ ಅನುಮೋದನೆ ನೀಡಿದ್ದಾರೆ ಎಂದರು.

ಕೆರೆ ತುಂಬಿಸುವ ಯೋಜನೆ, ಸಿಮೆಂಟ್ ರಸ್ತೆ, ಕುಡಿಯುವ ನೀರಿನ ವ್ಯವಸ್ಥೆ, ಕುಕನೂರಿನಲ್ಲಿ 100 ಬೆಡ್ ಆಸ್ಪತ್ರೆ, ಯಲಬುರ್ಗಾದಲ್ಲಿ ಬರುವ ಕೆಲವೇ ದಿನಗಳಲ್ಲಿ ರೈಲು ಉದ್ಘಾಟನೆ ನೆರವೇರಲಿದೆ. ಇನ್ನೂ ಹತ್ತು ಹಲವಾರು ಅಭಿವೃದ್ಧಿ ಕಾಮಗಾರಿಗಳು ನನ್ನ ಕ್ಷೇತ್ರದಲ್ಲಿ ನಡೆಯುತ್ತಿವೆ. ರಾಷ್ಟ್ರೀಯ ಹೆದ್ದಾರಿ, ರೈಲು ಮಾಡಿಸಿದ ಉದ್ದೇಶ ನಮ್ಮ ತಾಲೂಕಿನ ಅಭಿವೃದ್ಧಿ ಯಾಗಿದೆ. ಈ ಬೇಸಿಗೆಯಲ್ಲಿ ಜನರಿಗೆ ಯಾವುದೇ ರೀತಿಯ ಕುಡಿಯುವ ನೀರಿನ ತೊಂದರೆ ಆಗಬಾರದು.ಒಂದು ವೇಳೆ ಯಾವುದೇ ಸಮಸ್ಯೆಯಾದರೆ, ಸಂಬಂಧಿಸಿದ ಇಲಾಖೆಯ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡುವುದರ ಜೊತೆಗೆ ಅವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದರು.

ಸಿದ್ರಾಮಯ್ಯನವರ ಸರ್ಕಾರ ಜನತೆಗೆ ಪ್ರತಿವರ್ಷ ಒಂದು ಲಕ್ಷ ಮೂರು ಸಾವಿರ ಕೋಟಿ ಹಣವನ್ನು ನೇರವಾಗಿ ಜನರಿಗೆ ಕೊಡುತ್ತಿದೆ. ಗ್ಯಾರಂಟಿ ಯೋಜನೆಗಳ ಜೊತೆಗೆ 52 ಸಾವಿರ ಕೋಟಿ ಹಣವನ್ನು ಜನರಿಗೆ ಕೊಡುತ್ತಿದ್ದೇವೆ. ಶಕ್ತಿ ಯೋಜನೆ ಅಡಿ ಮಹಿಳೆಯರು ರಾಜ್ಯದಲ್ಲಿ ಪ್ರತಿದಿನ 60 ರಿಂದ 62 ಲಕ್ಷ ಮಹಿಳೆಯರು ಉಚಿತವಾಗಿ ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಇದೊಂದು ಜಾಗತಿಕ ದಾಖಲೆ ಯಾವ ರಾಜ್ಯದಲ್ಲಿ ಈ ರೀತಿಯ ಉಚಿತ ಯೋಜನೆ ಕೊಟ್ಟಿಲ್ಲ. ಮಹಿಳೆಯರು ಉಚಿತವಾಗಿ ಪ್ರಯಾಣ ಮಾಡಲು ನಮ್ಮ ಸರ್ಕಾರ ಸಾರಿಗೆ ನಿಗಮಗಳಿಗೆ ಇಲ್ಲಿಯವರೆಗೆ 10 ಸಾವಿರ 500 ಕೋಟಿ ಹಣವನ್ನು ಕೊಟ್ಟಿದ್ದು, ಇದಕ್ಕಾಗಿ ಈ ವರ್ಷದ ಬಜೆಟನಲ್ಲಿ 6000 ಸಾವಿರ ಕೋಟಿ ರೂ. ಹಣವನ್ನು ಮೀಸಲಿಡಲಾಗಿದೆ. ಪ್ರಯಾಣಿಕರಿಗೆ ತೊಂದರೆ ಆಗಬಾರದು ಎನ್ನುವ ಕಾರಣಕ್ಕಾಗಿ ಹೊಸ ಬಸ್ಸುಗಳನ್ನು ಖರೀದಿಮಾಡಲಾಗುತ್ತಿದೆ ಎಂದು ಹೇಳಿದರು.

ಕೊಪ್ಪಳ ಲೋಕಸಭಾ ಕ್ಷೇತ್ರದ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ ಅವರು ಮಾತನಾಡಿ, ಯಲಬುರ್ಗಾ ಕ್ಷೇತ್ರದಲ್ಲಿ ಬಸ್ ನಿಲ್ದಾಣ. ಶಾಲಾ–ಕೊಠಡಿಗಳು. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಎಷ್ಟು ಇರಬೇಕು ಅದಕ್ಕಿಂತ ಹೆಚ್ಚು ಆಗಿವೆ. ಜಿಲ್ಲಾ ಕೇಂದ್ರದಲ್ಲಿ ಇರುವ ಸೌಲಭ್ಯಗಳನ್ನು ಇಲ್ಲಿನ ಜನರಿಗೆ ಸಿಗಬೇಕೆಂದು ರಾಯರೆಡ್ಡಿ ಸಾಹೇಬರು ತಮ್ಮ ಕ್ಷೇತ್ರದ ಅಭಿವೃದ್ಧಿ ಮಾಡಿದ್ದಾರೆ. ಶಕ್ತಿ ಯೋಜನೆ ಜಾರಿಯಾದಾಗಿನಿಂದ ಈಗ ಜನರು ನಾಲ್ಕು ಪಟ್ಟು ತಿರುಗಾಡುತ್ತಿದ್ದಾರೆ. ಒಂದೇ ಒಂದು ಸಮಸ್ಯೆಗಳಾಗದಂತೆ ಸಾರಿಗೆ ಸಚಿವರು ಅದನ್ನು ನಿಭಾಯಿಸಿಕೊಂಡು ಬರುತ್ತಿದ್ದಾರೆ. ಅವರು ಮುಜರಾಯಿ ಸಚಿವರಾಗಿ ಮೊದಲ ಬಾರಿಗೆ ಹುಲಿಗೆಮ್ಮ ದೇವಸ್ಥಾನಕ್ಕೆ ಭೇಟಿ ನೀಡಿದಾಗ ಗರ್ಭ ಗುಡಿಗೆ 10 ಕೋಟಿ ಹಣ ನೀಡಿದ್ದರು. ವಿವಿಧ ಅಭಿವೃದ್ಧಿ ಯೋಜನೆಗಳ ಪ್ರಪೋಷಲ್ ಒಂದೇ ಸಲಕ್ಕೆ ತನ್ನ 100 ಕೋಟಿ ಅನುದಾನವನ್ನು ಹುಲಿಗೆಮ್ಮ ದೇವಸ್ಥಾನಕ್ಕೆ ನೀಡುತ್ತೇನೆ ಎಂದು ರಾಮಲಿಂಗಾರೆಡ್ಡಿ ಸಾಹೇಬರು ಹೇಳಿದ್ದರು ಎಂದರು.

ಈ ಕಾರ್ಯಕ್ರಮದಲ್ಲಿ ಬೇವೂರು ಗ್ರಾಮ ಪಂಚಾಯತಿ ಅಧ್ಯಕ್ಷರಾದ ಅಂದಮ್ಮ ಗವಿಸಿದ್ದಪ್ಪ ಬಳಿಗಾರ, ಜಿಲ್ಲಾಧಿಕಾರಿ ನಲಿನ್ ಅತುಲ್, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಕಲಬುರಗಿ ವ್ಯವಸ್ಥಾಪಕ ನಿರ್ದೇಶಕರಾದ ರಾಚಪ್ಪ ಎಮ್., ಕಲಬುರಗಿ ಮುಖ್ಯ ಕಾಮಗಾರಿ ಅಭಿಯಂತರಾದ ಚನ್ನನ ಬೋರಯ್ಯ. ಕೊಪ್ಪಳ ವಿಭಾಗೀಯ ನಿಯಂತ್ರಣಾಧಿಕಾರಿ ಎಮ್.ವೆಂಕಟೇಶ, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರಾದ ಹೇಮಂತ್, ಕೊಪ್ಪಳ ಸಹಾಯಕ ಆಯುಕ್ತರಾದ ಕ್ಯಾ. ಮಹೇಶ್ ಮಾಲಗಿತ್ತಿ, ಇತರೆ ಗಣ್ಯರು ಸೇರಿದಂತೆ ಇತರೆ ಹಲವಾರು ಜನರು ಉಪಸ್ಥಿತರಿದ್ದರು.


## ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧೀನದ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಆಯ್ಕೆಗಾಗಿ ಅಧಿಸೂಚನೆ ಹೊರಡಿಸಲಾಗಿದ್ದು, ತಾತ್ಕಾಲಿಕ ಆಯ್ಕೆ ಪಟ್ಟಿ ಬಿಡುಗಡೆ ಮಾಡಲಾಗಿದೆ. ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಜಿಲ್ಲಾಧಿಕಾರಿಗಳ ಕಚೇರಿ ಸೂಚನಾ ಫಲಕದಲ್ಲಿ ಪ್ರಕಟಸಲಾಗಿದ್ದು, ಆಕ್ಷೇಪಣೆ ಇದ್ದಲ್ಲಿ ಏ.22 ರಂದು ಮಧ್ಯಾಹ್ನ 1.30ರೊಳಗೆ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗಳಿಗೆ ಆಕ್ಷೇಪಣೆ ಸಲ್ಲಿಸಬಹುದು ಎಂದು ಬಳ್ಳಾರಿ ಗ್ರಾಮಾಂತರದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ತಿಳಿಸಿದ್ದಾರೆ.

# ವ್ಯಕ್ತಿತ್ವ ವಿಕಾಸನಕ್ಕೆ ನಿತ್ಯ ಪತ್ರಿಕೆ ಪುಸ್ತಕಗಳ ಓದಿ

## ಪ್ರಾಚಾರ್ಯ ಡಾ.ಪಿ.ಎಂ ವಾಗೀಶಯ್ಯ ಹೇಳಿಕೆ | ಸ್ಪರ್ಧಾತ್ಮಕ ಪರೀಕ್ಷೆ ವಿಶೇಷ ಉಪನ್ಯಾಸ




**ಹಂಪಿ ಟೈಮ್ಸ್ ಕೊಟ್ಟೂರು.**

ವ್ಯಕ್ತಿತ್ವ ವಿಕಾಸನಕ್ಕೆ ವಿದ್ಯಾರ್ಥಿಗಳು ನಿತ್ಯ ಪತ್ರಿಕೆ ಮತ್ತು ಪುಸ್ತಕಗಳನ್ನು ಓದುತ್ತಿರಬೇಕು, ಗ್ರಂಥಾಲಯ ಬಳಕೆ ಇದಕ್ಕೆ ಅತ್ಯಂತ ಉಪಯುಕ್ತ ಎಂದು ಪ್ರಾಚಾರ್ಯರು ಡಾ.ಪಿ.ಎಂ ವಾಗೀಶಯ್ಯ ಹೇಳಿದರು.

ಪಟ್ಟಣದ ಖಾಸಗಿ ಕಾಲೇಜ್ ನಲ್ಲಿ ಸಾರ್ವಜನಿಕ ಗ್ರಂಥಾಲಯದಿಂದ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅಧ್ಯಕ್ಷತೆವಹಿಸಿ ಮಾತನಾಡಿದರು.

ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೆ ಸುಲಭವಾಗಿ ಪರೀಕ್ಷೆ ಎದುರಿಸಲು ಹಲವಾರು ಸಲಹೆಗಳನ್ನು ನೀಡಿದರು.

ಸಿದ್ದೇಶ್ ಗೌಡ ಎಚ್ ಬಿ ಶಿಕ್ಷಕರು ಶೈಕ್ಷಣಿಕ ಮನೋವಿಜ್ಞಾನ, ಮೆಂಟಲ್ ಎಬಿಲಿಟಿ , ಅರ್ಥಶಾಸ್ತ್ರ ಗಣಿತಶಾಸ್ತ್ರ ವಿಜ್ಞಾನ, ಭೂಗೋಳಶಾಸ್ತ್ರ, ಸ್ಪರ್ಧಾತ್ಮಕ ಪರೀಕ್ಷೆಗೆ ಪುಸ್ತಕಗಳಷ್ಟೇ ಪತ್ರಿಕೆಗಳು ಬಹಳ ಉಪಯುಕ್ತವಾಗಿವೆ ಎಂದು ಉಪನ್ಯಾಸ ನೀಡಿದರು.

ಶಾಖಾ ಗ್ರಂಥಾಲಯ ಅಧಿಕಾರಿ ಮಲ್ಲಪ್ಪ ಗುಡ್ಡಾನೂರ್ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಯು ಗ್ರಂಥಾಲಯ ಸದಸ್ಯತ್ವ ಪಡೆದುಕೊಂಡು ನಿರಂತರ ಓದುತ್ತಿರಬೇಕು ಎಂದರು. ದೇವರಾಜ್ ಉಪನ್ಯಾಸಕರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಹೇಮಂತ, ರುದ್ರಮುನಿ ಸ್ವಾಮಿ ಉಪಸ್ಥಿತರಿದ್ದರು. ವೀರೇಶ್ ಉಪನ್ಯಾಸಕರು ಸ್ವಾಗತಿಸಿದರು. ಕುಮಾರಿ ಸ್ವಾತಿ ಪ್ರಾರ್ಥಿಸಿದರು. ಮಲ್ಲಿಕಾರ್ಜುನ ಎಂ ಉಪನ್ಯಾಸಕರು ನಿರೂಪಿಸಿ, ವಂದಿಸಿದರು.



ಹರಪನಹಳ್ಳಿ ತಾಲೂಕಿನ ನಂದಿಬೇವೂರು ಶ್ರೀ ಬಸವೇಶ್ವರ ರಥೋತ್ಸವ ವಿಜೃಂಭಣೆಯಿಂದ ಜರುಗಿತು. ಭಕ್ತರು ಹೂಹಣ್ಣು ಸಮರ್ಪಿಸಿ ಭಕ್ತಿ ಸಲ್ಲಿಸಿದರು.

## ಸರ್ಕಾರಿ ನೌಕರರ ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆಗಳು ಏ9–10

**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನ ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಏ9 ಮತ್ತು ಏ.10 ರಂದು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಜಿ.ಮಲ್ಲಿಕಾರ್ಜುನ ಗೌಡ ತಿಳಿಸಿದ್ದಾರೆ.



ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಕ್ರೀಡಾ ಕೂಟ ಉದ್ಘಾಟಿಸಲಿದ್ದಾರೆ. ಶಾಸಕ ಎಚ್.ಆರ್. ಗವಿಯಪ್ಪ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಪಂ ಸಿಇಒ ನೋಂಗ್ಜಾಯ್‌ಮೊಹಮದ್‌ಅಲಿ ಅಕ್ರಮ್‌ಶಾ, ಎಸ್ಪಿ ಶ್ರೀಹರಿಬಾಬು ಬಿ.ಎಲ್. ಹಾಗೂ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

ಜಿಲ್ಲಾ ಮಟ್ಟದ ಸರ್ಕಾರಿ ನೌಕರರು ಕ್ರೀಡಾಕೂಟದಲ್ಲಿ ವೈಯಕ್ತಿಕ ಸ್ಪರ್ಧೆಗಳು ಹಾಗೂ ಗುಂಪು ಸ್ಪರ್ಧೆಗಳಲ್ಲಿ ಭಾಗವಹಿಸಬಹುದಾಗಿದೆ. ಗುಂಪು ಆಟದಲ್ಲಿ ಪ್ರಥಮ ಸ್ಥಾನ ಪಡೆದವರು ಹಾಗೂ ವೈಯಕ್ತಿಕ ಆಟದಲ್ಲಿ ಪ್ರಥಮ ದ್ವಿತೀಯ ಸ್ಥಾನ ಪಡೆದವರು ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಬಹುದಾಗಿದೆ. ವಿಜಯನಗರ ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಕ್ರೀಡಾಪಟುಗಳು ಅಂದು ಬೆಳಿಗ್ಗೆ 10ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ವರದಿ ಮಾಡಿಕೊಳ್ಳಬೇಕು. ವಿಜಯನಗರದ 6 ತಾಲೂಕುಗಳಿಂದ ವಿವಿಧ ಇಲಾಖೆಯ ನೌಕರರು 1800 ಕ್ರೀಡಾಪಟುಗಳು ಈ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

## ಐಇಸಿ ಚಟುವಟಿಕೆ ನಿರ್ವಹಿಸಲು ಎಸ್‌ಹೆಚ್‌ಜಿ, ಎನ್‌ಜಿಓ ಸದಸ್ಯರ ನೇಮಕಾತಿಗೆ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾವ್ಯಾಪ್ತಿಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸ್ವಚ್ಚ ಭಾರತ್ ಮಿಷನ್ 2.0 ರ ಅಡಿಯಲ್ಲಿ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ಸ್ವಸಹಾಯ ಸಂಘ, ಎನ್‌ಜಿಓ ಸದಸ್ಯರ ನೇಮಕಾತಿಗೆ ಅರ್ಜಿಗಳನ್ನು ಅಹ್ವಾನಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

ಜಿಲ್ಲೆಯ ಹೊಸಪೇಟೆ ನಗರಸಭೆ, ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ, ಕಮಲಾಪುರ, ಹೂವಿನಹಡಗಲಿ ಪುರಸಭೆಗಳಲ್ಲಿ ಮತ್ತು ಕೂಡ್ಲಿಗಿ, ಕೊಟ್ಟೂರು, ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿಗಳಲ್ಲಿ ಪೂರ್ಣಾವಧಿಗೆ 3 ವರ್ಷಗಳ ಕಾಲ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ಆಸಕ್ತಿಯುಳ್ಳ ನಲ್ಮ್ ಡೇ, ಎನ್‌ಆರ್‌ಎಲ್‌ಎಂ, ಎನ್‌ಜಿಓ ಅಡಿಯಲ್ಲಿ ನೋಂದಾಯಿತ ಸ್ವಸಹಾಯ ಸಂಘ, ಎನ್‌ಜಿಓ ಸದಸ್ಯರಿಂದ ಅರ್ಜಿಯನ್ನು ಅಹ್ವಾನಿಸಲಾಗಿದ್ದು, ಆಯ್ಕೆ ಪ್ರಕ್ರಿಯೆ ಮತ್ತು ಗೌರವಧನಕ್ಕೆ ಸಂಬಂಧಿಸಿದ ಇತರೆ ವಿವರಗಳಿಗೆ ಆಯಾ ನಗರ ಸ್ಥಳೀಯ ಸಂಸ್ಥೆಗಳ ಪೌರಾಯುಕ್ತರು, ಮುಖ್ಯಾಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆಯಲು ಸೂಚಿಸಿದೆ. ಅಭ್ಯರ್ಥಿಗಳು ಅಗತ್ಯ ದಾಖಲಾತಿಗಳೊಂದಿಗೆ ಏ.25 ರ ಸಂಜೆ 5 ಗಂಟೆಯೊಳಗೆ ನಿಗಧಿತ ಅರ್ಜಿ ನಮೂನೆಯೊಂದಿಗೆ ಖುದ್ದಾಗಿ ಆಯಾ ಕಚೇರಿಯಲ್ಲಿ ಸಲ್ಲಿಸಬೇಕೆಂದು ತಿಳಿಸಲಾಗಿದೆ.

## 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ವತಿಯಿಂದ 5ನೇ ತರಗತಿಯಲ್ಲಿ ಶೇ.60 ಕ್ಕಿಂತ ಹೆಚ್ಚು ಅಂಕ ಪಡೆದಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ 2025–26ನೇ ಸಾಲಿಗೆ 6ನೇ ತರಗತಿಗೆ ಪ್ರತಿಷ್ಠಿತ ಖಾಸಗಿ ಶಾಲೆಗಳಲ್ಲಿ ಅರ್ಹತಾ ಪರೀಕ್ಷೆಯ ಮೂಲಕ ಪ್ರವೇಶ ಕಲ್ಪಿಸಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಬಿ. ಮಲ್ಲಿಕಾರ್ಜುನ ಅವರು ತಿಳಿಸಿದ್ದಾರೆ. ಆಸಕ್ತ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಆಯಾ ತಾಲ್ಲೂಕಿನ ಸಹಾಯ ನಿರ್ದೇಶಕರ ಕಚೇರಿಗಳಿಂದ ಅರ್ಜಿ ಪಡೆದು ಭರ್ತಿ ಮಾಡಿ ಮೇ 03 ರೊಳಗಾಗಿ ಅರ್ಜಿ ಸಲ್ಲಿಸಬಹುದು. ಮೇ 09 ರಂದು ಡಯಟ್ ಮೂಲಕ ಪ್ರವೇಶ ಪರೀಕ್ಷೆ ನಡೆಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ದೂ.08392–267932 ಅಥವಾ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು.